# ನೇಸರು

₹ 5/-

## ಮೈಸೂರು ಅಸೋಸಿಯೇಷನ್ ಮುಂಬೈ

Nesaru Tingalole Vol XXXII - 9 September 2014

PAGES 16



## ಅಸೋಸಿಯೇಶನ್‌ನಲ್ಲಿ ಗೌರಿ ಗಣೇಶ ಹಬ್ಬದ ಸಂಭ್ರಮ

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# ಎರಡು ದಿನ ನಾಟಕದ ಕಮ್ಮಟ



## ಮೊದಲನೆಯ ದಿನ

ಆಗಸ್ಟ್ ತಿಂಗಳಲ್ಲಿ ಎರಡು ದಿನ Theatre Workshop ಇದೆ ಅಂತ ತಿಳಿಯಿತು. ಅದು ಹೇಗೆ ಇರುತ್ತದೆ ಎಂದು ತಿಳಿಯಲು ಕುತೂಹಲವಾಯಿತು. 15ನೇ ತಾರೀಖು ಇಬ್ಬರೂ ಬೆಳಿಗ್ಗೆ ಅಲ್ಲಿಗೆ ಹೋದೆವು. ನನ್ನ ಸಹಕಲಾವಿದರು ಸಹ ಅಲ್ಲಿಗೆ ಬಂದಿದ್ದರು. ಎಲ್ಲರು ತಿಂಡಿ ತಿಂದ ನಂತರ 1ನೆಯ ಮಹಡಿಗೆ ತೆರಳಿದೆವು. ಡಾ|| ಸರ್ ಅವರು ಎಲ್ಲರನ್ನೂ ಗೋಲಾಕಾರದಲ್ಲಿ ನಿಲ್ಲಲು ಹೇಳಿ, ವಿಭಿನ್ನ ರೀತಿಯ ಸರಳ ವ್ಯಾಯಮಗಳನ್ನು ಹೇಳಿಕೊಟ್ಟರು. ಹಾಗೂ ಎಲ್ಲರಿಗೂ ಒಟ್ಟಿಗೆ ಮಾಡಲಿಕ್ಕೆ ಹೇಳಿದರು. ಆಗ ನಮಗೆ ಗೊತ್ತಾಯಿತು. ನಮ್ಮಲ್ಲಿಯೇ ಹೊಂದಾಣಿಕೆ ಇಲ್ಲ ಅಂತ. ನಾಟಕದಲ್ಲಿ ಹೊಂದಾಣಿಕೆ ಒಂದು ಮುಖ್ಯ ಅಂಗ. ಯಾವುದೇ ಕಲಾವಿದರ ಗುಂಪು ಒಟ್ಟಾಗಿ activity ಸರಿಯಾಗಿ ಮಾಡದಿದ್ದರೆ, ಅದು ಪ್ರೇಕ್ಷಕರಿಗೆ ಆಭಾಸವಾಗಿ ಕಾಣಬಹುದು. ಊಟದ ವಿರಾಮದ ನಂತರ ಕೆಲವು ನಾಟಕದ ಆಯ್ದ ಪ್ರತಿಗಳನ್ನು ಕೊಟ್ಟು ಅದರಲ್ಲಿಯ ಕೆಲವು ಭಾಗಗಳನ್ನು ಮಾಡಿ ತೋರಿಸಲಿಕ್ಕೆ ಹೇಳಿದರು. ನಾವು ನಮ್ಮಲ್ಲಿಯೇ ಅದರಲ್ಲಿಯ ಕೆಲವು ಭಾಗಗಳನ್ನು ಪಾತ್ರಗಳನ್ನು ಆಯ್ಕೆ ಮಾಡಿಕೊಂಡೆವು. ಅದರಲ್ಲಿ ಬರುವ ಸಂಭಾಷಣೆ voice modulation, ವಸ್ತ್ರ ವಿನ್ಯಾಸ ಇತ್ಯಾದಿಗಳನ್ನೆಲ್ಲ ಚರ್ಚೆ ಮಾಡಿ ತಯಾರಿ ಮಾಡಿಕೊಂಡೆವು. ಇದನ್ನು 17 ನೇ ತಾರೀಖಿಗೆ ಮಾಡಿಕೊಂಡೆವು. ಇದನ್ನು 17 ನೇ ತಾರೀಖಿಗೆ ಮಾಡಿ ತೋರಿಸಬೇಕೆಂದು ಸಹ ಹೇಳಿದರು.

Workshop ನ ಎರಡನೆಯ ದಿವಸ ಬೆಳಿಗ್ಗೆ ಎಲ್ಲರೂ 10 ಗಂಟೆಗೆ ಸೇರಿದವು. ತಿಂಡಿ ತಿಂದ ನಂತರ ಡಾ| ಸರ್ ಎಲ್ಲರಿಗೂ ಎರಡರ ಗುಂಪು ಮಾಡಿ coordination & synchronize ನ ಆಸನಗಳನ್ನು ಹೇಳಿಕೊಟ್ಟರು. ಇದರ ಮೂಲಕ ಇಬ್ಬರು ಕಲಾವಿದರ coordination ಹಾಗೂ ಭರವಸೆ ಹೇಗೆ ಇರಬೇಕೆಂದು ತಿಳಿಸಿಕೊಟ್ಟರು. ನಾಟಕ ಮಾಡುವಾಗ, ಈ coordinate ಇರುವುದು ಅತಿಮುಖ್ಯ. ಇಲ್ಲದಿದ್ದರೆ ನಾಟಕ ಕಳಪೆ ಆಗಿ ಕಾಣಬಹುದು ಅಂತ ಹೇಳಿದರು.

ಇದಾದ ನಂತರ ಬೇರೆ ನಾಲ್ಕು ಗುಂಪುಗಳನ್ನು ಮಾಡಿ ದ್ರೌಪದಿಯ ವಸ್ತ್ರಹರಣದ scene ಮಾಡಿ ತೋರಿಸಬೇಕೆಂದು ಹೇಳಿದರು. ಅದಕ್ಕೆ ಬೇಕಾದ voice modulation ಸಂಭಾಷಣೆಯನ್ನು ನಾವೇ ಬರೆದು ತೋರಿಸಬೇಕೆಂದು ಹೇಳಿದರು.

ಊಟದ ವಿರಾಮದ ನಂತರ ಹಿಂದಿನ ದಿನದ ನಾಟಕದ ಆಯ್ದ ಭಾಗವನ್ನು ಮಾಡಿ ತೋರಿಸಲಿಕ್ಕೆ ಹೇಳಿದರು. ಪ್ರತಿ ಗುಂಪಿನ ನಾಟಕದ ಪ್ರಸಂಗ ಆದ ಮೇಲೆ ಅದರ ಬಗ್ಗೆ ಚರ್ಚೆ ಮಾಡಿ ಅದರ ಲೋಪದೋಷಗಳನ್ನು ತಿಳಿಸಿ ಹೇಳಿದರು. ಈಗ Workshop ಅಂದರೆ ಒಂದು ತರಹದ ನಮ್ಮನ್ನೂ ನಾವೇ ಅವಲೋಕಿಸಿದ ಹಾಗೆ ಆಯಿತು. ಕಲಿಯಲು ತುಂಬಾ ಸಿಕ್ಕಿತು. ಹಾಗೂ ಕಲಿಯಲು ತುಂಬಾ ಇದೆ ಅಂತಲೂ ತಿಳಿಯಿತು. ಎಲ್ಲರೂ ಡಾ| ಸರ್ ಗೆ ಧನ್ಯವಾದ ಹೇಳಿ, ಈ Workshop ನ ಅನುಭವದ ಬುತ್ತಿ ಹೊತ್ತು ಮನೆಗೆ ತೆರಳಿದೆವು.

– ಶ್ರೀಮತಿ ವೀಣಾ ಜೋಶಿ

## ಎರಡನೆಯ ದಿನದ ನಾಟಕದ ಕಮ್ಮಟ ಶಾಲೆ

ದಿನಾಂಕ 15 ಹಾಗೂ 17 ಆಗಸ್ಟ್ ರಂದು ಮೈಸೂರ ಅಸೋಸಿಯೇಶನ್ ಡಾ| ಬಿ.ಆರ್.ಮಂಜುನಾಥ ನೇತೃತ್ವದಲ್ಲಿ ನಡೆಯಿತು. ನಾವು ಸುಮಾರು 25 ಜನರಿದ್ದೆವು. 7 ವರ್ಷದ ಚಿಕ್ಕಮಕ್ಕಳಿಂದ 70 ವರ್ಷದ ಯುವಕರಿಂದ ಕೂಡಿತ್ತು. ಮೊದಲು ನಾಟಕಕ್ಕೆ ಬೇಕಾದ ರಂಗು ತಾಲೀಮು ಹೇಳಿಕೊಟ್ಟರು. ಡಾ| ಅವರು ಎಲ್ಲರಿಗೂ ಸರಳ ರೀತಿಯ ವ್ಯಾಯಾಮ ಹಾಗೂ ಯೋಗಾಸನ ಮಾಡಿ ತೋರಿಸಿ, ನಂತರ ಅದನ್ನು ಎಲ್ಲರಿಂದಲೂ ಮಾಡಿಸಿದರು. ನಿಯಮಿತವಾಗಿ ವ್ಯಾಯಾಮ ಹಾಗೂ ಆಸನಗಳನ್ನು ಮಾಡದವರಿಗೆ ಮುಂದೆ ಹಲವಾರು ದಿನ ಕಾಲು ನೋವು, ಸೊಂಟ ನೋವು ಇತ್ಯಾದಿ ಒಂದು ಒದ್ದಾಡಿದರು. ಆದರೆ ದೇಹ ಸರಿಯಾಗಿರಬೇಕಾದರೆ ವ್ಯಾಯಾಮ ಅತ್ಯಗತ್ಯ ಅಂತ ಡಾ| ಅವರು ಹೇಳಿದರು. ಹಾಗೆಯೇ ಇದು ನಾಟಕ ಕರ್ಮಶಾಲೆಯ ಒಂದು ಮುಖ್ಯ ಅಂಗ ಕೂಡ ಅಂತ ಹೇಳಿದರು.

ಮಧ್ಯಾಹ್ನ ಒಳ್ಳೆಯ ಊಟವಾದ ನಂತರ ಕೆಲವು ನಾಟಕಗಳ ತುಣುಕುಗಳನ್ನು ಕೊಟ್ಟು ಅಭಿನಯ ಮಾಡಲು ಹೇಳಿದರು. ಅದಕ್ಕೆ ಬೇಕಾದ ಹಾವಭಾವ, ಧ್ವನಿ ಹೊಂದಾಣಿಕೆ (voice modulation) ಇತ್ಯಾದಿಗಳನ್ನೂ ಹೇಗೆ ಮಾಡಬೇಕೆಂದು ಹೇಳಿಕೊಟ್ಟರು. ನಂತರ ಅದನ್ನು ಕೆಲವರು ಮಾಡಿ ತೋರಿಸಿದರು.



ಇದಾದ ಮೇಲೆ ನಮ್ಮಲ್ಲಿಯೇ ನಾಲ್ಕು ಗುಂಪುಗಳನ್ನಾಗಿ ಮಾಡಿ, ಪ್ರತಿ ಗುಂಪಿಗೆ ಬೇರೆ ಬೇರೆ ನಾಟಕದ ಒಂದು ಅಂಕನ್ನೂ ಕೊಟ್ಟು, ಅದನ್ನು ಮಾರನೆಯ ದಿನ ತಯಾರಿ ಮಾಡಿಕೊಂಡು ಅಭಿನಯ ಮಾಡಿ ತೋರಿಸಬೇಕೆಂದು ಹೇಳಿದರು. ಪ್ರತಿಯೊಂದು ಗುಂಪಿಗೆ ಪಾತ್ರ ವಿತರಣೆ, ಸಂಭಾಷಣೆ ಹೇಳಲು ಹಾಗೂ ಅಭಿನಯು ಮಾಡಲಿಕ್ಕೆ ಪೂರ್ಣ ಸ್ವಾತಂತ್ರ್ಯ ಕೊಟ್ಟರು. ಎಲ್ಲ ಗುಂಪಿನ ಜನರು ತಮ್ಮ ತಮ್ಮಲ್ಲೇ ಚರ್ಚಿಸಿ ನಾಟಕದ ತಯಾರಿ ಮಾಡತೊಡಗಿದರು.

ದಿನಾಂಕ 17 ರಂದು ಬೆಳಿಗ್ಗೆ ಎಲ್ಲರೂ 10 ಗಂಟೆಗೆ ಸೇರಿದೆವು. ಆ ದಿನ ಡಾ| ಅವರು ನಾಟಕದ ಸರಳ ವ್ಯಾಯಾಮದ ಜೊತೆಗೆ, ನಾಟಕಕಾರರಲ್ಲಿ ಇರಬೇಕಾದ ಸಮನ್ವಯ (coordination) ಹಾಗೂ ಹೊಂದಾಣಿಕೆಯ (synchronize) ಕೆಲವು ಭಾಗಗಳನ್ನು ಹೇಳಿಕೊಟ್ಟರು. ಅದನ್ನು ಎಲ್ಲರು ಚೆನ್ನಾಗಿ ಮಾಡಿ ತೋರಿಸಿದರು. ಮಧ್ಯಾಹ್ನ ಊಟದ ಮೊದಲು ಪ್ರತಿಯೊಂದು ಗುಂಪಿಗೆ ಒಂದು ಮಹಾಭಾರತದ ಕಥಾ ಪ್ರಸಂಗವನ್ನು (ದ್ರೌಪದಿಯ ವಸ್ತ್ರಾಪರಣ) ಕೊಟ್ಟು, ಅದನ್ನು ನೀವೇ (ಅಂದರೆ ಪ್ರತಿಯೊಂದು ಗುಂಪಿನವರು) ರಚಿಸಿ, ಸಂಭಾಷಣೆ ಬರೆದು, ಪಾತ್ರ ವಿತರಿಸಿ ಅಭಿನಯ ಮಾಡಿ ತೋರಿಸಲಿಕ್ಕೆಂದು ಹೇಳಿದರು.

ಊಟವಾದ ನಂತರ ಎಲ್ಲರೂ ಅಂದರೆ ಪ್ರತಿಯೊಂದು ಗುಂಪಿನವರು

*(ಪುಟ 14ಕ್ಕೆ)*

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. - ಸಂ

The views expressed by the contributors in this journal are theirs and not of the Association and the Association is not in anyway responsible for the same.
- *Ed.*

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

# ನೇಸರು
## ತಿಂಗಳೋಲೆ

**ಸಂಪುಟ 31** **ಸಪ್ಟೆಂಬರ್ 2014** **ಸಂಚಿಕೆ 9**

## ದಿಟ್ಟ ರಾಜಕೀಯ ಪ್ರಜ್ಞೆಯ ಲೇಖಕ - ಡಾ. ಅನಂತಮೂರ್ತಿ

ಭಾರತದಂತಹ ಬಹುಭಾಷಿಕ ಹಾಗೂ ಬಹು ಸಂವೇದನೆಗಳುಳ್ಳ ಸಮುದಾಯದಲ್ಲಿ ಅನಿವಾರ್ಯವಾಗಿ ಎದುರಾಗುವ ಸವಾಲುಗಳನ್ನು ತಮ್ಮದೇ ಸತ್ವ ಪರೀಕ್ಷೆಯೆನ್ನುವಂತೆ ಸದಾ ಅದಕ್ಕೆ ಒಡ್ಡಿಕೊಂಡವರು ಅನಂತಮೂರ್ತಿಗಳು. ಅನಂತಮೂರ್ತಿಯವರ ಬದುಕು ಮತ್ತು ಬರಹಗಳು ಸದಾ ಚರ್ಚೆಯ ವಿಷಯವಾಗಿರಲಿಕ್ಕೆ ಕಾರಣ ಅವರೊಬ್ಬ ಸೂಕ್ಷ್ಮಮತಿಯ ಒಳವಿಮರ್ಶಕರಾಗಿದ್ದರು. ಅವರೇ ಹೇಳಿಕೊಂಡಂತೆ "ನಾನು ಪರಂಪರೆಯ ಜೊತೆ ಜಗಳ ಮಾಡುವುದು ಹೊರಗಿನವನಾಗಿ ಅಲ್ಲ, ಒಳಗಿನವನಾಗಿ. ಹೀಗಾಗಿ ನನ್ನನ್ನು ನಾನು ಒಬ್ಬ ಒಳವಿಮರ್ಶಕ ಎಂದು ತಿಳಿದುಕೊಂಡಿದ್ದೇನೆ". ಒಂದು ರೀತಿಯಲ್ಲಿ ಅನಂತಮೂರ್ತಿಯವರು ಬೆಳೆಯುತ್ತಿರುವ ಪ್ರಗತಿಪರ ಬರಹಗಾರರಿಗೆ ದೊಡ್ಡ ಧ್ವನಿಯಾಗಿದ್ದರು.

ಅನಂತಮೂರ್ತಿಯವರದು ಎಂತಹ ಅದ್ಭುತ ವಿಚಾರಧಾರೆ!. ಪ್ರಸಕ್ತ ವಿದ್ಯಮಾನಗಳಿಗೆ ತಮ್ಮ ಬಿಚ್ಚುಮನದಿಂದ ಪ್ರತಿಸ್ಪಂದಿಸುತ್ತಿದ್ದರು. ತಮ್ಮ ಎಲ್ಲ ನಿಲುವನ್ನು ಮತ್ತೆ ಮತ್ತೆ ಆತ್ಮ ಪರೀಕ್ಷೆಗೆ ಒಳಪಡಿಸಿಕೊಳ್ಳುತ್ತಿದ್ದರು. ಇಂತಹ ಸಂದರ್ಭಗಳು ತಮ್ಮ ಓರಗೆಯ ಸಾಹಿತಿಗಳೊಡನೆ ಮುಖಾಮುಖಿಯಾಗಿಸಿದರೂ ತಮ್ಮ ನಿಲುವಿನಿಂದ ಹಿಂದೆ ಸರಿಯಲಿಲ್ಲ. ಅನಂತ ಮೂರ್ತಿಯವರ ವ್ಯಕ್ತಿತ್ವದಲ್ಲಿ ಏನೋ ಒಂದು ರೀತಿಯ ಆಕರ್ಷಣೆಯಿತ್ತು. ಆ ವ್ಯಕ್ತಿತ್ವದಲ್ಲಿ ಗಾಢವಾದ ವರ್ಚಸ್ಸಿತ್ತು. ಅವರು ಲವಲವಿಕೆಯ ಬುದ್ಧಿಜೀವಿಯಾಗಿದ್ದರು. ಅನಂತಮೂರ್ತಿಯವರ ಜಾತ್ಯಾತೀತ ನಿಲುವು ಸಾರ್ವಕಾಲಿಕವಾದ ಮೌಲ್ಯಗಳಲ್ಲಿ ಒಂದಾಗಿದೆ. ಪರಸ್ಪರ ಭಿನ್ನಾಭಿಪ್ರಾಯ, ಸಂಕುಚಿತ ಮನೋಭಾವನೆಗಳನ್ನು ಮೀರಿ ವಿಮರ್ಶಾತ್ಮಕ ದೃಷ್ಟಿಯಿಂದ ಮುಕ್ತ ಮನಸ್ಸಿನಿಂದ ಅನಂತಮೂರ್ತಿಯವರ ತತ್ವವನ್ನು ಮನಗಾಣಬೇಕು.

'ಬದುಕಿನ ಪ್ರತಿಯೊಂದು ಕ್ಷಣವೂ ವಜ್ರದ ಪ್ರಖರತೆಯಿಂದ ಕೂಡಿರಬೇಕು' ಎಂದು ತಿಳಿಸಿಕೊಟ್ಟವರು ಕಾರಂತರು. ಆದರೆ 'ಪರಂಪರಾಗತವಾಗಿ ಬಂದ ಬದುಕಿನ ರೀತಿ ನೀತಿಗಳನ್ನು ಯಾರ ಮುಲಾಜಿಲ್ಲದೆ ಹೇಗೆ ವಿರೋಧಿಸಬೇಕು' ಎನ್ನುವುದನ್ನು ಮನದಟ್ಟು ಮಾಡಿದವರು ಅನಂತಮೂರ್ತಿಗಳು. ಬರೀ ಲೇಖಕ ಎನ್ನುವ ಚೌಕಟ್ಟಿನಲ್ಲಿ ನಾವು ಅನಂತಮೂರ್ತಿಯನ್ನು ನೋಡುವ ಹಾಗಿಲ್ಲ. ಅನಂತಮೂರ್ತಿಯವರ ಸಾಧನೆ ಅನಂತವಾದುದು. ಅನಂತ ಮೂರ್ತಿಯವರು ರಾಜಕೀಯ ಪ್ರಜ್ಞೆಯ ಲೇಖಕರಾಗಿರೋದರ ಜೊತೆಗೆ, ಜನಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ಸರಕಾರ ಯಾವ ರೀತಿ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬಹುದು ಎನ್ನುವುದರ ಬಗ್ಗೆ ಚಿಂತಿಸುವ ಮಹಾನ್ ಸಮಾಜವಾದಿಯಾಗಿದ್ದರು.

ಅನಂತಮೂರ್ತಿಯವರು ಬರೆದ ಕತೆ, ಕಾದಂಬರಿ, ವಿಮರ್ಶೆಗಳು ನಮ್ಮ ಸಂಸ್ಕೃತಿ ಚಿಂತನೆಗೆ ವಿಶಿಷ್ಟ ರೂಪವನ್ನು ಕೊಟ್ಟವು. ಅವರು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದ ಚಿಂತನೆಗಳಲ್ಲಿ ಆಧುನಿಕ ಭಾರತದ ಬಹುತೇಕ ಬಿಕ್ಕಟ್ಟುಗಳು, ಸಂಘರ್ಷಗಳನ್ನು ಗಂಭೀರವಾಗಿ ಗ್ರಹಿಸಿರುವುದನ್ನು ಕಾಣಬಹುದು. ಬರಿ ಸಮಸ್ಯೆಯನ್ನು ಎತ್ತಿಹಿಡಿಯುವ ಕೆಲಸ ಮಾಡದೆ ಸಮಸ್ಯೆಗೆ ತಕ್ಕ ಪರಿಹಾರವನ್ನು ಸೂಚಿಸಿದವರು. ಅವರ ದಾರ್ಶನಿಕ ಚಿಂತನೆಗಳು ಅವರ ಅನುಪಸ್ಥಿತಿಯಲ್ಲೂ ನಮ್ಮಗೆ ಉತ್ತಮ ಮಾರ್ಗದರ್ಶನ ನೀಡಬಲ್ಲವುಗಳಾಗಿವೆ. ಪ್ರಸಕ್ತ ರಾಜಕೀಯ ವಿದ್ಯಮಾನಗಳು ಅವರನ್ನು ಚಿಂತೆಗೀಡು ಮಾಡಿವೆ. ತಮ್ಮ ಕಣ್ಣೆದುರೇ ಭಾರತ ಗಾಂಧಿಯನ್ನು ಮರೆತು ಮತೀಯ ಶಕ್ತಿಗಳ ಪಾಲಾಗುತ್ತಿದೆಯೆಂದು ನೊಂದುಕೊಂಡಿದ್ದರು.

ಒಬ್ಬ ಸಾಹಿತಿಯ ಮಾತಿಗೂ ಮತ್ತು ಒಬ್ಬ ರಾಜಕಾರಣಿಯ ಮಾತಿಗೂ ಇರುವ ವ್ಯತ್ಯಾಸವನ್ನು ಅನಂತಮೂರ್ತಿಗಳು ಕಂಡುಕೊಂಡ ರೀತಿ ಹೀಗಿದೆ 'ಬಾಲ್ಜಾಕ್' ಎಂಬ ದೊಡ್ಡ ಕಾದಂಬರಿಕಾರ 'ರಾಜಕೀಯವೆಂದರೆ ಸಂಗೀತ ಕಚೇರಿಯ ಸಂಭ್ರಮದಲ್ಲಿದ್ದಾಗ ಕೇಳಿಸುವ ಗುಂಡಿನ ಸದ್ದು' ಎನ್ನುತ್ತಾನೆ. ಇಂಪಾದ ಸಂಗೀತಕ್ಕೆ ಕಿವಿಗೊಟ್ಟು ಅದನ್ನು ಅನುಭವಿಸುವ ಲೇಖಕ ಈ ಗುಂಡಿನ ಸದ್ದನ್ನು ಕೇಳಿಸಿಕೊಳ್ಳದೇ ಇರಲು ಸಾಧ್ಯವೇ?. ರಾಜಕಾರಿಣಿ ಚರ್ಚಿಲ್ ಇಂಗ್ಲೆಂಡಿನಲ್ಲಿ ಫ್ಯಾಸಿಸಂ ವಿರೋಧಿಸಿ ಗೆದ್ದ. ಆದರೆ ಇವತ್ತಿಗೂ ಉಳಿದಿರುವುದು ಜಾರ್ಜ್ ಆರ್ವೆಲ್‌ನಂಥ ಸಾಹಿತಿಯ ಫ್ಯಾಸಿಸಂ ವಿರೋಧದ ಮಾತುಗಳು. ಚರ್ಚಿಲ್‌ನ ಮಾತು ಮತ್ತು ಕ್ರಿಯೆಗಳು ಅವನ ಕಾಲಕ್ಕೆ ಸೀಮಿತವಾಗಿ ಉಳಿದಿದ್ದರೆ ಆರ್ವೆಲ್‌ನ ಮಾತುಗಳು ತ್ರಿಕಾಲಗಳಲ್ಲೂ ನೆಟ್ಟಿದ್ದೇ ಸದ್ಯವನ್ನು ಧ್ವನಿಸುತ್ತದೆ". ಒಬ್ಬ ಲೇಖಕ ರಾಜಕೀಯದ ಬಗ್ಗೆ ಆಸ್ಥೆ ವಹಿಸಿದರೆ ಅವನ ಸಾಹಿತ್ಯ ಕೃಷಿಯ ಕಾರಣದಿಂದಾಗಿಯೇ ಸದ್ಯದ ರಾಜಕೀಯಕ್ಕೆ ಒಳಪಡದ ಶಾಶ್ವತ ಸತ್ಯಗಳನ್ನು ಅವನು ಕಾಣಬಲ್ಲವನಾಗುತ್ತಾನೆ. ಆದ್ದರಿಂದಲೇ ಲೇಖಕನಾದವನೊಬ್ಬನ ರಾಜಕೀಯ ಪ್ರಜ್ಞೆ ಕೇವಲ ರಾಜಕಾರಣಿಯ ಪ್ರಜ್ಞೆಗಿಂತ ಕೊಂಚ ಭಿನ್ನವಾಗಿರುತ್ತದೆ.

'ಬದುಕುವುದೆಂದರೆ ತೊಡಗಿಕೊಳ್ಳುವುದು' ಎಂದು ಹೇಳಿ ಅದೇ ರೀತಿ ಬದುಕಿದ ಅನಂತಮೂರ್ತಿ ಯವರ ಬದುಕು ನಮಗೆಲ್ಲರಿಗೂ ಮಾದರಿಯಾದುದು. ಅವರ ಆ ಬೌದ್ಧಿಕ ಧೈರ್ಯ, ಧೀಮಂತಿಕೆ, ಸ್ವತಂತ ಚಿಂತನೆ, ಅಧ್ಯಯನಶೀಲತೆಯನ್ನು ಮರೆಯುವ ಹಾಗಿಲ್ಲ. ಕನ್ನಡ ನಾಡು ನುಡಿ, ಸಾಹಿತ್ಯ ಸಂಸ್ಕೃತಿಯನ್ನು ತಮ್ಮ ಕಥನ ಕೌಶಲ, ಸಾಮಾಜಿಕ ಪ್ರತಿಸ್ಪಂದನ ಹಾಗೂ ವಿಮರ್ಶಾತ್ಮಕ ಬರವಣಿಗೆಗಳ ಮೂಲಕ ಉಜ್ವಲಗೊಳಿಸಿದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಯು ಆರ್. ಅನಂತಮೂರ್ತಿ ಅವರು ಇತ್ತೀಚೆಗೆ ನಮ್ಮನ್ನು ಅಗಲಿದ್ದಾರೆ. ಇಂತಹ ಮಹಾನ್ ಚೇತನಕ್ಕೆ ನಮ್ಮ ಪ್ರೀತಿಪೂರ್ವಕ ಶ್ರದ್ಧಾಂಜಲಿ.

ಡಾ. ಜ್ಯೋತಿ ಸತೀಶ್

# ಅಪರೂಪದ ಸಂಶೋಧನಾ ಕೃತಿ
# 'ಮುಂಬಯಿ ಕನ್ನಡ ಕಥಾ ಸಾಹಿತ್ಯ ಒಂದು ಅಧ್ಯಯನ'

ಮುಂಬಯಿ ಕನ್ನಡ ಕಥಾ ಸಾಹಿತ್ಯ ಒಂದು ಅಧ್ಯಯನ ಡಾ. ಮಮತಾ ರಾವ್ ಅವರ ಪಿಎಚ್‌ಡಿ ಅಧ್ಯಯನಕ್ಕೆಂದು ಮುಂಬಯಿ ವಿಶ್ವವಿದ್ಯಾಲಯಕ್ಕೆ ಡಾ. ಜಿ.ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಮಹಾಪ್ರಬಂಧದ ಪ್ರಕಟಿತ ಕೃತಿಯಾಗಿದೆ. 339 ಪುಟಗಳಲ್ಲಿ ವಿಷಯ ವೈವಿಧ್ಯತೆಗಳನ್ನು ತನ್ನೊಡಲಿನಲ್ಲಿ ತುಂಬಿಕೊಂಡಿರುವ ಈ ಕೃತಿಯ ಪುಟವೂ ಸಂಶೋಧಕಿಯ ಕಠಿಣ ಪರಿಶ್ರಮವನ್ನು ನಮ್ಮ ಕಣ್ಣ ಮುಂದೆ ತಂದು ನಿಲ್ಲಿಸುತ್ತದೆ.

ಈ ಗ್ರಂಥದಲ್ಲಿ ಡಾ. ಮಮತಾ ರಾವ್ ಅವರು ಇತರ ಸಾಹಿತ್ಯ ಪ್ರಭೇದಗಳಾದ ಕಾದಂಬರಿ, ನೀಳ್ಗತೆ, ಕಥನ, ಕವನ ಹಾಗೂ ಮೌಖಿಕ ಪರಂಪರೆಯ ಅಖ್ಯಾಯಿಕೆಗಳನ್ನು ಸಾಂದರ್ಭಿಕವಾಗಿ ಉಲ್ಲೇಖಿಸಿದರೂ, ಸಣ್ಣರತೆಗಳು ಅದರಲ್ಲೂ ಮುಂಬಯಿ ಬರೆಹಗಾರರ ಸಣ್ಣಕತೆಗಳು ಹಾಗೂ ಅವುಗಳ ವೈಶಿಷ್ಟ್ಯಗಳನ್ನು ಸಮಗ್ರವಾಗಿ ಚರ್ಚಿಸಿರುವುದು ವಿಶೇಷತೆಯಾಗಿದೆ.

ಸಣ್ಣ ಕತೆಗಳ ಹುಟ್ಟು ಮತ್ತು ಬೆಳವಣಿಗೆಯ ಬಗ್ಗೆ ಆಳವಾಗಿ ಅಭ್ಯಾಸ ನಡೆಸಿರುವುದು ಲೇಖಕಿ ಶಿಲಾಮಾನವ ಕೊರೆದ ಕಲ್ಲುಗಳ ಮೇಲಿನ ಚಿತ್ರಗಳು ಕೂಡ ಮಾನವನ ಕತೆ ಹೇಳಬೇಕು ಎನ್ನುವ ತವಕಕ್ಕೆ ದೊರೆತ ಅಭಿವ್ಯಕ್ತಿಯೆಂದು ಅಭಿಪ್ರಾಯಪಡುತ್ತಾರೆ. ಪಾಶ್ಚಿಮಾತ್ಯ ದೇಶದಲ್ಲಿ ಮೊದಲು ಅಕ್ಷರರೂಪದಲ್ಲಿ ರೂಪುಗೊಂಡ ಸಣ್ಣಕತೆಗಳ ಹೆಜ್ಜೆಗುರುತುಗಳನ್ನು ಗುರುತಿಸಿ ಲೇಖಕಿ ಭಾರತದಲ್ಲಿ ಸಣ್ಣಕತೆಗಳೆಂಬ ಇರ್ದಿಷ್ಟ ಹೆಸರಿನಿಂದ ಅವರನ್ನು ಕರೆಯಲಾಗದಿದ್ರೂ, ರಾಮಾಯಣ, ಮಹಾಭಾರತ, ಬೌದ್ಧ ಹಾಗೂ ಜೈನ ಗ್ರಂಥಗಳು ಮತ್ತು ಹಿಂದೂ ಪುರಾಣಗಳಲ್ಲಿ ಸಿಗುವ ಕಥೆಗಳೂ ಆ ಕಾಲಘಟ್ಟದ ಅತ್ಯುತ್ತಮ ಘಟನಾ ಪ್ರಧಾನವಾದ ಕತೆಗಳೆಂದು ಉಲ್ಲೇಖಿಸುತ್ತಾರೆ.

ಮಹಾಪ್ರಬಂಧದ ಮೊದಲ ಎರಡು ಅಧ್ಯಾಯಗಳಲ್ಲಿ ಲೇಖಕಿ ಸಣ್ಣಕತೆಗಳ ಇತಿಹಾಸ, ಅವು ನಡೆದು ಬಂದ ದಾರಿ ಹಾಗೂ ಈಗಿನ ಕಾಲಘಟ್ಟದಲ್ಲಿ ಅವು ಪಡೆದುಕೊಂಡ ಹರಿವು ಹಾಗೂ ಕೆಲವೊಮ್ಮೆ ಸಂಕೀರ್ಣತೆಗಳನ್ನು ಎಳೆಎಳೆಯಾಗಿ ಚರ್ಚಿಸಿರುವ ರೀತಿ ಲೇಖಕಿಯ ಓದಿನ ಆಳ ವಿಸ್ತಾರವನ್ನು ನಮ್ಮ ಮುಂದಿಡುತ್ತದೆ. ಮುಂಬಯಿ ಲೇಖಕರ ಸಣ್ಣಕತೆಗಳ ವೈಶಿಷ್ಟ್ಯ ಹಾಗೂ ಅನನ್ಯತೆಯನ್ನು ಅವರು ಸ್ಪಷ್ಟಪಡಿಸಿದ್ದಾರೆ.

ಈ ಕೃತಿಯ ಮೂರನೇ ಅಧ್ಯಾಯ ಮುಂಬಯಿ ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿ ನಮಗೆ ಕೆಲವೊಂದು ಉಪಯುಕ್ತ ಮಾಹಿತಿಯನ್ನು ನೀಡುತ್ತದೆ. ಇಲ್ಲಿ ನಮಗೆ ಸಿಗುವ ಮಾಹಿತಿಯಂತೆ ಕೃಷ್ಣಕುಮಾರ ಕಲ್ಲೂರರು ಮುಂಬಯಿಯ ಮೊಟ್ಟ ಮೊದಲ ಕಥೆಗಾರರೆಂಬ ಅಭಿಪ್ರಾಯವನ್ನು ನೇರವಾಗಿ ವ್ಯಕ್ತಪಡಿಸುತ್ತಾರೆ. ಈ ಅಧ್ಯಾಯವನ್ನು ಸಂಶೋಧಕಿ ಕನ್ನಡಕ್ಕಾಗಿ ಕೆಲಸ ಮಾಡಿದ, ಮಾಡುತ್ತಿರುವ ಸಂಘ-ಸಂಸ್ಥೆಗಳು, ಸಾಹಿತ್ಯ ಕೂಟಗಳು, ವೈಯಕ್ತಿಕ ನೆಲೆಯಲ್ಲಿ ಕನ್ನಡ ಸಾಹಿತ್ಯ ಹಾಗೂ ಪತ್ರಿಕೋದ್ಯಮದಲ್ಲಿ ನಿರತರಾದವರ ಕೊಡುಗೆಗಳನ್ನು ಕೂಲಂಕಷವಾಗಿ ಚರ್ಚಿಸಿದ್ದಾರೆ. ಆದುದರಿಂದ ಇವರ ಈ ಕೃತಿಗೆ ಒಂದು ಭದ್ರ ತಳಪಾಯ ಸಿಕ್ಕಿದೆ ಎನ್ನಬಹುದು.

ಮುಂದಿನ ಅಧ್ಯಾಯಗಳಾದ ಮುಂಬಯಿಯ ಕತೆಗಾರರು ಹಾಗೂ ಕನ್ನಡ ಕತೆಗಾರರ ಕಥಾಜಗತ್ತು ಮತ್ತು ಮುಂಬಯಿ ಕತೆಗಾರರ ಕಥಾಲೋಕ ಇಲ್ಲಿ ಅವರು ನೀಡುವ ವಿವರಣೆಯಿಂದ ಅವರು ಮಾಡಿರುವ ತಲಸ್ಪರ್ಶಿ ಅಧ್ಯಯನದ ಅನುಭವ ನಮಗೆ ತಿಳಿದು ಬರುತ್ತದೆ. ಇಲ್ಲಿ ಕತೆಗಾರರ ಎಲ್ಲ ವಿವರಗಳೂ ಅಗ್ರಮಾನ್ಯ ಸಾಹಿತಿಗಳಿಂದ ತೊಡಗಿ ಯುವ ಲೇಖಕರ ವಿವರ, ಅವರ ತೆಗಳು ನಿಷ್ಪಕ್ಷಪಾತ ಸಮೀಕ್ಷೆಯನ್ನು ನೀಡಿರುವ ಡಾ. ಮಮತಾ ರಾವ್ ಅವರು ಓದುಗರ ಮೆಚ್ಚುಗೆ ಪಡೆಯುತ್ತಾರೆ. ಮುಂಬಯಿಯ ಮಹಿಳಾ ಕತೆಗಾರರ ಕಥಾಲೋಕವನ್ನು ತುಂಬ ಕಾಳಜಿಪೂರ್ವಕವಾಗಿ ಇಲ್ಲಿ ಪ್ರಸ್ತುತಪಡಿಸಿದ್ದಾರೆ.



✍ ಡಾ. ಕರುಣಾಕರ್ ಎಮ್. ಶೆಟ್ಟಿ

ಬರೆಯಬೇಕೆನ್ನುವ ಉತ್ಕಟೇಚ್ಛೆಯಿಂದ ಯಾವೊಂದೂ ಫಲಾಪೇಕ್ಷೆಯಿಲ್ಲದೆ ಬರೆಯುವಂತಹ ಮಹಿಳೆಯರು ಇಲ್ಲಿ ಸಾಕಷ್ಟು ಮಂದಿ ಇದ್ದಾರೆ. ಅಲ್ಲದೆ, ವಿವಾಹದ ಅನಂತರ ಇಲ್ಲಿಗೆ ಬಂದು ಮಹಿಳೆಯರು ಇಲ್ಲಿಯ ಗಡಿಬಿಡಿಗಳ ಬದುಕಿನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತ ಮನೆಮಾತು ಏನಿದ್ದರೂ, ಕನ್ನಡದಲ್ಲಿ ನಿಷ್ಠೆಯಿಂದ ಬರೆಯುತ್ತ ತಮ್ಮೊಳಗಿದ್ದ ಸೃಜನಶೀಲತೆಯನ್ನು ಕತೆಗಳ ಮೂಲಕ ಪ್ರಸ್ತುತಪಡಿಸಿರುವುದು ಅವರ ಹೆಚ್ಚುಗಾರಿಕೆಯೆಂದು ಲೇಖಕಿ ತಿಳಿಸಿದ್ದಾರೆ. ಈ ಅಧ್ಯಾಯದಲ್ಲಿ ಕತೆಗಾರ್ತಿಯರ ಜತೆಗೆ ಅವರ ಸ್ವವಿವರ ಕತೆಗಾರ ಸಮೀಕ್ಷೆಯು ಬಂದಿದ್ದು ಓದುಗರನ್ನು ತಮ್ಮತ್ತ ಸೆಳೆಯುತ್ತದೆ.

ಮುಂಬಯಿ ಕತೆಗಾರರ ಕತೆಗಳು ಏಕೆ ವಿಶಿಷ್ಟ ಹಾಗೂ ಅನನ್ಯ ಎನ್ನುವುದನ್ನು ಕೆಲವು ಕತೆಗಾರರ ಕತೆಗಳನ್ನು ಉದಾಹರಣೆಯಾಗಿರಿಸಿಕೊಂಡು ವಿಸ್ತೃತವಾಗಿ ಚರ್ಚಿಸಲಾಗಿದೆ. ಈ ಅಧ್ಯಯನ ಲೇಖಕಿಯ ವಿಮಶಾ ಪ್ರಜ್ಞೆಯನ್ನು ನಮಗೆ ತಿಳಿಸುತ್ತದೆ. ದೂರದಿಂದ ಮುಂಬಯಿಗೆ ಬಂದ ಕನ್ನಡಿಗರು ಹಿಂದಿನಿಂದಲೂ ಇಲ್ಲಿ ಕನ್ನಡ ಸಾಹಿತ್ಯ ಲೋಕದಲ್ಲಿ ಆಸಕ್ತಿಯಿಂದ ಕೆಲಸ ಮಾಡುತ್ತಾ ಬಂದಿದ್ದಾರೆ. ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಮುಂಬಯಿ ಲೇಖಕರು ನೀಡಿರುವ ಯೋಗದಾನ ಮಹತ್ವದ್ದು. ಇಲ್ಲಿಯ ಕತೆಗಾರರ ಕತೆಗಳಲ್ಲಿ ವೈವಿಧ್ಯತೆಗಳಿದ್ದು ಕತೆಗಳಲ್ಲಿ ಹೊಸತನವೂ ತುಂಬಿದ್ದು, ಓದುಗರನ್ನು ತನ್ನತ್ತ ಸೆಳೆಯುವುದರಲ್ಲಿ ಸಮರ್ಥವಾಗಿವೆ. ಮುಂಬಯಿ ಕನ್ನಡ ಕತೆಗಾರರ ಸಾಹಿತ್ಯ ಕ್ಷೇತ್ರದ ಹಲವು ಹತ್ತು ಆಯಾಮಗಳಿಗೆ ಬೆಳಕು ತೋರಿದ ಶ್ರೇಯಸ್ಸು ಡಾ. ಮಮತಾ ರಾವ್ ಅವರಿಗೆ ಸಲ್ಲುತ್ತದೆ. ಕನ್ನಡ ಕಥಾ ಸಾಹಿತ್ಯಲೋಕಕ್ಕೆ ಹೊಸ ನೀರು ಹಾಯಿಸಿದ ಮುಂಬಯಿ ಕತೆಗಾರರ ಅನನ್ಯತೆ, ವೈಶಿಷ್ಟ್ಯವನ್ನು ಅವರು ಶ್ರದ್ಧಾಪೂರ್ವಕವಾಗಿ ಪರಿಶ್ರಮದಿಂದ ಬೆಳಕಿಗೆ ಹಿಡಿದಿದ್ದಾರೆ.

ಕನ್ನಡ ವಿಮರ್ಶಕರ ಗಮನಕ್ಕೆ ಬಾರದ ಲೇಖಕರ ಕತೆಗಳು, ಕತೆಗಾರರ ಪ್ರತಿಭೆಯನ್ನು ಸೊಗಸಾಗಿ ಲೋಕಮುಖಕ್ಕೆ ಪರಿಚಯಿಸಿರುವುದು ಈ ಮಹಾ ಪ್ರಬಂಧದ ಸಾಧನೆ. ಸರಳ ಭಾಷೆ, ಖಚಿತ ಅಭಿಪ್ರಾಯ, ನೇರ ನಿರೂಪಣೆ, ಚಿಕಿತ್ಸಕ ಒಳನೋಟ, ನಿಷ್ಪಕ್ಷಪಾತತನ, ಸಫಲ ಸಂಶೋಧಕರಿಗೆ ಇರಬೇಕಾದ ಈ ಎಲ್ಲಾ ಗಣಗಳು ಡಾ. ಮಮತಾ ರಾವ್ ಅವರ ಈ ಕೃತಿಯಲ್ಲಿ ನಾವು ಕಾಣುತ್ತೇವೆ.

ಮುಂಬಯಿ ಕತೆಗಾರರ ಅಭಿವ್ಯಕ್ತಿಯ ಅನನ್ಯತೆ, ಅವರ ಮೂಲ ನೆಲೆಗಳಾದ ವಸತಿ ಮಸ್ಯೆ, ಕೊಳಗೇರಿ ಬದುಕು, ಬಹು ಸಂಸ್ಕೃತಿಯ ಶಕ್ತಿ ಮಿತಿ, ಹುಟ್ಟೂರಿನ ಸೆಳೆತ, ಬಹು ಸಂಸ್ಕೃತಿಯ ಶಕ್ತಿ ಮಿತಿ, ಹುಟ್ಟೂರಿನ ಸೆಳೆತ, ಕೋಮು-ಸೌಹಾರ್ದತೆ, ಮೋಸದ ಜಗತ್ತು, ಕಾರ್ಮಿಕರ ದಾರುಣತೆ ಮತ್ತು ಶೋಷಣೆ, ಹೆಣ್ಣು-ಗಂಡಿನ ಸಂಬಂಧ, ಸಾವು, ಪುರಾಣ ಪ್ರಜ್ಞೆ ಇತ್ಯಾದಿಗಳನ್ನು ಇಲ್ಲಿ ವಿಶ್ಲೇಷಣೆಯ ಮೂಲಕ ತೆರೆದಿಟ್ಟುರುವುದು ಪ್ರಶಂಸನೀಯ. ನಲ್ವತ್ತರ ದಶಕದಿಂದ ಇತ್ತೀಚೆಗಿನವರೆಗೆ ಮುಂಬಯಿ ಬದುಕಿನಲ್ಲಾದ ಬದಲಾವಣೆಗಳನ್ನು ಪಲ್ಲಟಗಳನ್ನು ಅದನ್ನು ಮುಂಬಯಿ ಲೇಖಕರು ಹಿಡಿದಿಟ್ಟ ರೀತಿಯಲ್ಲಿ ಲೇಖಕಿ ಇಲ್ಲಿ ಸಮರ್ಥವಾಗಿ ಸೆರೆಹಿಡಿದಿದ್ದಾರೆ. ಈ ಕೃತಿಯನ್ನು ಬರೆದ ಡಾ. ಮಮತಾ ರಾವ್ ಅದೇ ರೀತಿ ಈ ಕೃತಿಯನ್ನು ಪ್ರಕಟಿಸಿರುವ ಅವರ ಸಂಶೋನಾ ಮಾರ್ಗದರ್ಶಕರಾಗಿರುವ ಅಭಿಜಿತ್ ಪ್ರಕಾಶನದ ಡಾ. ಜಿ.ಎನ್. ಉಪಾಧ್ಯ ಅವರು ಅಭಿನಂದನೆಗೆ ಪಾತ್ರರಾಗುತ್ತಾರೆ. ■

# ಅನೂನ ಸಾಂಸ್ಕೃತಿಕ ನೇತಾರ

ವಿದ್ವಾಂಸರೆಂದರೆ ಹೀಗಿರುತ್ತಾರೆ ಎಂದು ಹೆಸರತ್ತಿ ಹೇಳಬಲ್ಲ ವಿರಳ ಬಹುಮುಖ ವ್ಯಕ್ತಿಗಳಲ್ಲಿ ಗೊ.ರು.ಚನ್ನಬಸಪ್ಪ ಅವರೂ ಒಬ್ಬರು. ಅವರ ಕುರಿತು ಬರೆಯುವುದು ಅನಿರ್ವಚನೀಯ ಆನಂದ ಹಾಗೂ ಅಭಿಮಾನದ ಸಂಗತಿ. ಕನ್ನಡದ, ಕರ್ನಾಟಕದ ಸೃಷ್ಟಿಶೀಲತೆಯನ್ನು ಜಾಗ್ರತಗೊಳಿಸಿದ ಧೀಮಂತ ಚೇತನ ಗೊರುಚ. ಅವರದು ಸುಸಂಸ್ಕೃತ ವ್ಯಕ್ತಿತ್ವ. ಅವರು ಕಲೆ, ಸಾಹಿತ್ಯ ಸಂಗೀತ, ಜಾನಪದ, ಸಂಸ್ಕೃತಿಗಳ ಉಪಾಸಕರೂ, ಆರಾಧಕರೂ ಆಗಿದ್ದಾರೆ. 'ಮೂರು ಗಳಿಗೆಯ ಬಾಳು ಮಗ ಮಗಿಸುತಿರಲಿ' ಎಂಬ ಕಣವಿ ಅವರ ಮಾತು ಗೊರುಚ ಅವರಿಗೆ ಚೆನ್ನಾಗಿ ಅನ್ವಯಿಸುತ್ತದೆ. ಗೊರುಚ ಅವರು ಸ್ನೇಹ ಜೀವಿ. ಮಾತು-ಕೃತಿಗಳ ನಡುವೆ ಎರಡಿಲ್ಲದ ಬಾಳ್ವೆ ಅವರದು. ಮೃದು ಮಾತು, ಜನಪರ ಕಾಳಜಿ, ವ್ಯಾಪಕ ಜೀವನಾನುಭವ, ಶಿಸ್ತು, ಸಂಯಮವನ್ನು ಮೈಗೂಡಿಸಿಕೊಂಡ ಅವರು ನೈಜ ಕರುಣಾಮಯಿ. ಕನ್ನಡದ ವಿಷಯದಲ್ಲಿ ಅವರ ತನುಶುದ್ಧ, ಮನಶುದ್ಧ , ಭಾವವೂ ಶುದ್ಧ.

ಕನ್ನಡ ನಾಡು ನುಡಿ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಗೆ ಶ್ರಮಿಸಿದ ಮಹನೀಯರಲ್ಲಿ ಗೊ.ರು.ಚನ್ನಬಸಪ್ಪ ಅವರದು ಎದ್ದು ಕಾಣುವ ಹೆಸರು. 'ಗೊರುಚ' ಅವರು ಕನ್ನಡಕ್ಕಾಗಿ ತಮ್ಮನ್ನು ತೇದುಕೊಂಡ ದಣಿವರಿಯದ ಚೇತನ. ಜಾನಪದ ವಿದ್ವಾಂಸರಾಗಿ, ಮಹಾನ್ ಸಂಘಟಕರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅವರು ಗೈದ ಸಾಂಸ್ಕೃತಿಕ ಪರಿಚಾರಿಕೆ ನಾಡಿಗೆ ಮಾದರಿಯಾಗಿದೆ. ಒಬ್ಬ ವ್ಯಕ್ತಿ ಮನಸ್ಸು ಮಾಡಿದರೆ ಏನೆಲ್ಲ ಮಾಡಬಹುದು ಎಂಬುದಕ್ಕೆ ಗೊರುಚ ಅವರು ನಮಗೆ ಉತ್ತಮ ನಿದರ್ಶನ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿಗೆ ಕಾಯಕಲ್ಪ ನೀಡಿ ಎಲ್ಲ ಜಿಲ್ಲೆ, ತಾಲೂಕು, ಹೊರನಾಡ ಘಟಕಗಳನ್ನು ರಚಿಸಿ 'ವಚನ ಸಂಸ್ಕೃತಿ'ಯ ವೈಭವವನ್ನು ಲೋಕಮುಖಕ್ಕೆ ಮನದಟ್ಟು ಮಾಡಿಕೊಟ್ಟ ಅಪ್ರತಿಮ ಸಾಹಸಿ ಗೊ.ರು.ಚನ್ನಬಸಪ್ಪ. ಅವರು ಬರೇ ಒಬ್ಬ ವ್ಯಕ್ತಿಯಲ್ಲ; ಮಹಾನ್ ಶಕ್ತಿಯೂ ಆಗಿದ್ದಾರೆ.


ಮಣಿಯದಿಹ ಮನವೊಂದು
ಸಾಧಿಸುವ ಹಟವೊಂದು
ನಿಜದ ನೇರಕೆ ನಡೆವ ನಿಶ್ಚಲತೆಯೊಂದು
ಅನ್ಯಾಯಕ್ಕೆಂದಿಗೂ ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು"

ಈ ಮೇಲಿನ ಕವಿತೆಯ ಸಾಲುಗಳು ಗೊರುಚ ಅವರ ವ್ಯಕ್ತಿತ್ವಕ್ಕೆ ಬರೆದ ಭಾಷ್ಯದಂತಿದೆ.



ಮುಂಬೈಯಲ್ಲಿ ಕನ್ನಡ ಡಿಂಡಿಮ:

ಗೊರುಚ ಅವರದು ದಣಿವರಿಯದ ಚೇತನ. ಗೊರುಚ ಅವರು ಅನೇಕ ಬಾರಿ ಮುಂಬೈಗೆ ಬಂದು ಹೋಗಿದ್ದಾರೆ. ಅವರ ಕಾಲಾವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕ ಸ್ಥಾಪನೆಯಾಯಿತು. ಅದರ ಉದ್ಘಾಟನೆಗೆ ಅವರು ಬಂದಿದ್ದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತನ್ನು ದೇಶದಾದ್ಯಂತ ವಿಸ್ತರಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಮಹಾರಾಷ್ಟ್ರದಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಮೂರು ಘಟಕಗಳು ಆರಂಭಗೊಂಡು ಬಸವಾದಿ ಪ್ರಮಥರ ವಿಚಾರಧಾರೆಯನ್ನು ಜನಮನಕ್ಕೆ ಮುಟ್ಟಿಸುವ ಕಾರ್ಯದಲ್ಲಿ ನಿರತವಾಗಿವೆ. ಇದಕ್ಕೆ ಅವರ ದೂರದೃಷ್ಟಿಯೂ ಕಾರಣ. ಕನ್ನಡ ಸಾಹಿತ್ಯ ಪರಿಷತ್ತಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇದೀಗ ಗೋಡಂಬಿ ಆಕಾರದ ಕರ್ನಾಟಕಕ್ಕೆ ಸೀಮಿತವಾಗಿಬಿಟ್ಟಿದೆ. ಹೀಗಿರುವಾಗ ಗೊರುಚ ಅವರು ೨೦೧೦ರಲ್ಲಿ ಅಖಿಲ ಭಾರತ ಹತ್ತನೆಯ ಶರಣ ಸಾಹಿತ್ಯ ಸಮ್ಮೇಳನವನ್ನು ಹೊರನಾಡಾದ ಮುಂಬೈಯಲ್ಲಿ ನಡೆಸಿರುವುದು ಶ್ಲಾಘನೀಯ ಅಂಶ.



✍ ಡಾ. ಜಿ. ಎನ್. ಉಪಾಧ್ಯ

೨೦೧೨ರಲ್ಲಿ ಮುಂಬೈಯಲ್ಲಿ ನಡೆದ ಮೊದಲ ಅನುಭಾವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದವರು ಗೊರುಚ. ೨೦೧೪ರಲ್ಲಿ ಮೊನ್ನೆ ಮೊನ್ನೆ ಬಸವ ಜಯಂತಿ ಶತಮಾನೋತ್ಸವ ನೆನಪಿನ ಸಮ್ಮೇಳನವನ್ನು ಗೊರುಚ ಅವರು ಮುಂಬೈಯಲ್ಲಿ ಆಯೋಜಿಸಿ ಶರಣರ ವಿಚಾರಧಾರೆಯನ್ನು ಸೀಮೋಲ್ಲಂಘನಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮುಂಬೈ ಕನ್ನಡಿಗರ ಬಗೆಗೆ ಹೊರನಾಡ ಕನ್ನಡಿಗರ ಬಗೆಗೆ ಅವರು ವಿಶೇಷ ಕಾಳಜಿಯನ್ನು ಹೊಂದಿದ್ದಾರೆ.

ನಿಜಾರ್ಥದ ಅನುಭಾವಿ:

ಗೊರುಚ ಅವರದು ಎಂದಿಗೂ ಏಕಾಂತದಿಂದ ಲೋಕಾಂತದೆಡೆಗೇ ನಡೆ. ಗೊರುಚ ಅವರು ಅಪ್ಪಟ ಗಾಂಧಿವಾದಿ. "ಜನನ ಮತ್ತು ಮರಣಗಳ ಈ ಆದಿ ಅಂತ್ಯಗಳು ನಮ್ಮ ಕೈಯುಲ್ಲಿಲ್ಲ. ನಮ್ಮ ಕೈಯುಲ್ಲೇ ಇರುವುದೆಂದರೆ ಆ ಎರಡು ಘಟನೆಗಳ ಮಧ್ಯೆ ಕಣ್ಣಾಡಿಸಲು ಸಾಧ್ಯವಿರುವ ಜೀವನ ಅಥವಾ ಬದುಕು".

ಇಂಥ ಬದುಕಿನ ಬಯಲ ರಹಸ್ಯಕ್ಕೆ ಸಂಬಂಧಿಸಿದ ಅನುಭಾವ ಸಾಹಿತ್ಯ ವಚನ ಸಾಹಿತ್ಯದ ಕುರಿತು ಗೊರುಚ ಅವರು ನಡೆಸಿರುವ ವ್ಯಾಪಕ ಚಿಂತನೆ ಗಮನಾರ್ಹವಾಗಿದೆ. ಅವರೊಬ್ಬ ಒಳ್ಳೆಯ ಅನುಭಾವಿ ಕವಿಯೂ ಚಿಂತಕರೂ ಆಗಿದ್ದಾರೆ. "ಜಾಗತೀಕರಣ, ಆಧುನೀಕರಣ, ನಗರೀಕರಣ, ನವೀಕರಣ, ಕೈಗಾರಿಕೀಕರಣ, ವಿಕೇಂದ್ರೀಕರಣ, ರಾಜಕೀಕರಣ, ವಾಣಜ್ಯೀಕರಣ ಇತ್ಯಾದಿ

ಕಾರಣಗಳು ಸ್ಥಳೀಯ ಸಂಸ್ಕೃತಿಯ ಮರಣ ಮೃದಂಗ ಬಾರಿಸುತ್ತಿರುವ ಬಹುರೂಪಿ ಬಯಲಾಟವೇ ಎಲ್ಲೆಲ್ಲೂ ನಡೆಯುತ್ತಿರುವ ಮತ್ತು ನವ ನಾಗರಿಕತೆಯ ಅನುಕರಣೆಯ ಅವಸರ ಮತ್ತು ಅಬ್ಬರದಲ್ಲಿ ಸಮಾಜದ ಸ್ವಾಸ್ಥ್ಯವೇ ಸಂಘರ್ಷಕ್ಕೆ ತುತ್ತಾಗಿರುವ ಇಂದಿನ ಸನ್ನಿವೇಶದಲ್ಲಿ ಕೆರಳಿಕೆಯ ಇಂದಿನ ದಿನಮಾನದಲ್ಲಿ ಅರಳಿಕೆಯ ಅನುಭಾವ ಸಾಹಿತ್ಯ ಚಿಂತನೆ" ಅಗತ್ಯ ಎಂಬ ದೃಢ ನಿಲುವು ಅವರದು. ನಮ್ಮ ಮನಸ್ಸಿನ ಅಸಂಗತ ಆಟಗಳನ್ನು ನಿಲ್ಲಿಸಬೇಕು. ನಾವು ಮೌನವಾಗಿರುವುದನ್ನು ಕಲಿತರೆ ಅರಿವಿನ ಅರಮನೆಯ ಬಾಗಿಲು ತೆರೆದುಕೊಳ್ಳುತ್ತದೆ ಎಂದಿದ್ದಾರೆ ಗೊರುಚ.

**ಗೊರುಚ ಉವಾಚ:**

ಈ ಬದುಕೂ ಸಾಮಾನ್ಯವಲ್ಲ. ಹಿರಿಯ ಕವಿ ನಾಡೋಜ ಚನ್ನವೀರ ಕಣವಿ ಅವರು ಹೇಳುವಂತೆ, "ಬದುಕು ಎಲ್ಲ ಹೊತ್ತಗೆಯಲಿಲ್ಲ. ಹುಗಿದಿಲ್ಲ ದುಡ್ಡಿನಂತೆ ನೆಲದಲ್ಲಿ, ಮಾಡಿದಂತೆ ಅದರಾಟ ಮಾಟ. ಒಟ್ಟಿದರೆ ಗುಡ್ಡದಂತೆ. ಕೈಗೆ ಸಿಕಿ"ಯೂ ಸಿಗದಂತೆ ಬೂರಲದ ಅರಳಿ ಹೊರಳಿದಂತೆ. ಬಟ್ಟ ಬಯಲಿನ ಗುಟ್ಟನೊಡೆದು ಗಾಳಿಯಲಿ ಹರಡಿದಂತೆ" ಈ ಕವಿನುಡಿಗಳು ಬದುಕಿಗೆ ಬರೆದ ವ್ಯಾಖ್ಯಾನದಂತಿದೆ. ಬದುಕು ಎನ್ನುವುದು ಪುಸ್ತಕದ ಪಾಂಡಿತ್ಯವಲ್ಲ; ಮಾತಿನ ಮಂಟಪವಲ್ಲ. ಭಿತ್ತಿಯ ಚಿತ್ರವಲ್ಲ. ನೆಲದಲ್ಲಿ ಹುದುಗಿಸಿಟ್ಟ ನಿಧಿಯಲ್ಲ. ನಾವು ಕುಳಿತಲ್ಲಿಗೇ ಬಂದು ಬೀಳುವ ಕಾಂಚನವೂ ಅಲ್ಲ. ಕಟ್ಟಿಡುವ ಗಂಟಲ್ಲ. ತೊಟ್ಟು ಬಿಡುವ ಬಟ್ಟೆಯಲ್ಲ. ಕಟ್ಟಿಕೊಳ್ಳುವ ಅಥವಾ ಬಿಟ್ಟುಬಿಡುವ ದಾಂಪತ್ಯವೂ ಅಲ್ಲ. ಅದರ ಆಟ-ಮಾಟಗಳು ನಾವು ನಡೆದಂತೆ. ಒಟ್ಟಿದರೆ ಬೆಟ್ಟ, ಹಿಡಿಯ ಹೋದರೆ ಕೈಗೆ ಸಿಕಿ"ದರೂ ದಕ"ದ ನಿಧಾನ; ಬಳಸಿಯೂ ಉಳಿಯುವ ವಿಧಾನ. ಒಟ್ಟಾರೆ ಬಟ್ಟ ಬಯಲಲ್ಲಿ ಬಿಚ್ಚಿಟ್ಟ ಗುಟ್ಟು! ಮಾನವನ ಹುಡುಕಾಟ, ತಡಕಾಟ, ಸೆಣಸಾಟ - ಈ ಎಲ್ಲವುಗಳ ಅಂತಿಮ ಗುರಿಯೂ ನೆಮ್ಮದಿ. ಮದುವೆಯಿರಲಿ, ಮಸಣವಿರಲಿ, ಜಾತ್ರೆಯಿರಲಿ, ಯಾತ್ರೆಯಿರಲಿ ವ್ಯಕ್ತಿ ಸುಖ-ಶಾಂತಿ ಬಯಸುತ್ತಾನೆ. ಹಸಿವಾದಾಗ ಊಟ ಮಾಡುವುದು, ಬಾಯಾರಿದಾಗ ನೀರು ಕುಡಿಯುವುದು, ಅನಿಸಿದಾಗ ಅಡ್ಡಾಡುವುದು, ಬಿಸಿಲಿನಲ್ಲಿದ್ದಾಗ ನೆರಳು ಬಯಸುವುದು. ಚಳಿಯಲ್ಲಿದ್ದಾಗ ಬೆಚ್ಚನೆಯ ಹೊದಿಕೆ ಬಯಸುವುದು, ಬೇಕೆನಿಸಿದಾಗ ನೋಡುವುದು, ಹೇಳುವುದು, ಕೇಳುವುದು, ಮದುವೆಯಾಗುವುದು, ಮನೆಕಟ್ಟುವುದು, ಮಕ"ಳನ್ನು ಬಯಸುವುದು- ಇವೆಲ್ಲವೂ ನಮ್ಮ ಸುಖ-ಶಾಂತಿಗಳಿಗಾಗಿ. ಈ ಸುಖ-ಶಾಂತಿ ಬಯಸುವುದೇ ನಮ್ಮ ಮನಸ್ಸು. ಹಾಗೆಯೇ ಅದನ್ನು ಕೆಡಿಸುವುದೂ ಮನಸ್ಸೇ.

ಜೀವರಾಶಿಗಳಲ್ಲಿ ಮಾನವ ಮನಸ್ಸಂತೂ ಅತ್ಯಂತ ವಿಚಿತ್ರವಾದುದು. ಅದು ಒಮ್ಮೆ ನಗುತ್ತದೆ; ಒಮ್ಮೆ ಅಳುತ್ತದೆ. ಒಮ್ಮೆ ಶಾಂತವಾಗಿರುತ್ತದೆ; ಮತ್ತೊಮ್ಮೆ ಭ್ರಾಂತಿಗೊಳಗಾಗುತ್ತದೆ. ಒಮ್ಮೆ ನೀಡುತ್ತದೆ; ಒಮ್ಮೆ ಬೇಡುತ್ತದೆ. ಒಮ್ಮೆ ಪ್ರೀತಿಸುತ್ತದೆ; ಒಮ್ಮೆ ದ್ವೇಷಿಸುತ್ತದೆ. ಒಮ್ಮೆ ರಕ್ಷಿಸುತ್ತದೆ; ಒಮ್ಮೆ ಶಿಕ್ಷಿಸುತ್ತದೆ. ಒಮ್ಮೆ ಹೇಳುತ್ತದೆ; ಒಮ್ಮೆ ಕೇಳುತ್ತದೆ. ಒಮ್ಮೆ ಧೈರ್ಯ ತಾಳುತ್ತದೆ; ಒಮ್ಮೆ ಭಯಪಡುತ್ತದೆ. ಒಮ್ಮೆ ನಿಷ್ಠೆ ತೋರುತ್ತದೆ; ಮತ್ತೊಮ್ಮೆ ಭ್ರಷ್ಟಗೊಳ್ಳುತ್ತದೆ. ಒಮ್ಮೆ ಉದಾರವಾಗಿದ್ದರೆ ಮತ್ತೊಮ್ಮೆ ಸಂಕುಚಿತಗೊಳ್ಳುತ್ತದೆ. ಒಮ್ಮೆ ಸರಸಗೊಂಡಿರುತ್ತದೆ, ಮತ್ತೊಮ್ಮೆ ವಿರಸಗೊಳ್ಳುತ್ತದೆ. ಒಮ್ಮೆ ಚುರುಕಾಗಿರುತ್ತದೆ; ಮತ್ತೊಮ್ಮೆ ಜಡವಾಗಿ ಬಿಡುತ್ತದೆ. ಒಮ್ಮೆ ಬದುಕಬೇಕೆನ್ನುತ್ತದೆ; ಒಮ್ಮೆ ಸಾಯಬೇಕೆನ್ನುತ್ತದೆ. ಹೀಗೆ ಒಂದೊಂದು ಸಂದರ್ಭದಲ್ಲಿ ಒಂದೊಂದು ನಿಲುವು; ಒಂದೊಂದು ಸನ್ನಿವೇಶದಲ್ಲಿ ಒಂದೊಂದು ಒಲವು, ಒಂದೊಂದು ಸಮಯದಲ್ಲಿ ಒಂದೊಂದು ರೀತಿ, ಒಂದೊಂದು ಸಂದರ್ಭದಲ್ಲಿ ಒಂದೊಂದು ನೀತಿ - ಈ ದ್ವಂದ್ವದ ದೌರ್ಬಲ್ಯವನ್ನು ದಾಟುವುದಕಾ"ಗಿಯೇ ಇಂತಹ ಅನುಭಾವ ಸಾಹಿತ್ಯ ಚಿಂತನೆ ನಡೆಯಬೇಕಾಗಿದೆ. ಹರಿದಾಡುವ ಮನವನ್ನು ಹದಗೊಳಿಸಿ ಅದನ್ನು ನಿಜದ ಶಾಂತಿಯ ನೆಲೆಯಲ್ಲಿ ನಿಲ್ಲಿಸುವ ಸಾಧ್ಯತೆಯೇ ಅನುಭಾವ ಚಿಂತನ. ನಮಗೆಲ್ಲ ತಿಳಿದಿರುವಂತೆ ನಮ್ಮ ಅಸ್ತಿತ್ವವಿರುವುದು ಈ ಮನಸ್ಸಿನಿಂದಷ್ಟೇ ಅಲ್ಲ. ನಮಗೆ ಒಂದು ದೇಹವಿದೆ; ಒಂದು ಹೃದಯವಿದೆ. ಅಂದರೆ ದೇಹ, ಮನಸ್ಸು, ಹೃದಯ - ಈ ಮೂರೂ ಜತನವಾಗಿರಬೇಕು; ಜಾಗೃತವಾಗಿರಬೇಕು; ಧೃತಿಯಿಂದಿರಬೇಕು. ಅವು ಜಡವಾದರೂ ಕೇಡು; ಬಡವಾದರೂ ಕೇಡು. ಈ ಮೂರೂ ಹದಗೊಂಡಿರಬೇಕು. ಒಂದಕೆ" ಒಂದು ಸಂಬಂಧವಿರಬೇಕು, ಸಮನ್ವಯ-ಸಾಮರಸ್ಯವಿರಬೇಕು. ಇಲ್ಲವಾದರೆ ಅವು ಪರಸ್ಪರ ಘರ್ಷಣೆಗೆ ತೊಡಗಿ ಅವೇ ಸೊರಗಿಬಿಡುತ್ತವೆ. ಶಾಂತಿ ಮತ್ತು ಕಾಂತಿಯನ್ನು ಕಳೆದುಕೊಳ್ಳುತ್ತವೆ. ಇದನ್ನರಿತೇ ದೇಹ-ಮನಸ್ಸು-ಹೃದಯಗಳ ನಿಕಟವಾದ ಮತ್ತು ನಿರಂತರವಾದ ಹೊಂದಾಣಿಕೆಯ ಮಧ್ಯೆ ಸಂಬಂಧವಿರಬೇಕೆಂದು ಪ್ರಾಚೀನ ಋಷಿಗಳು, ದಾರ್ಶನಿಕರು, ಸಂತರು ಮಾಡಿದ ವೈಚಾರಿಕ ಚಿಂತನೆಯನ್ನೇ ನಾವು ಅನುಭಾವ ಎನ್ನುತ್ತೇವೆ.

ಈ ಜಗತ್ತಿನಲ್ಲಿ ಎಲ್ಲಿ ನೆಮ್ಮದಿ ಇದೆ? ಯಾರು ನೆಮ್ಮದಿಯಿಂದಿದ್ದಾರೆ? ವಾಸ್ತವವಾಗಿ ಮಾನವನ ಹುಡುಕಾಟವೆಲ್ಲ ಈ ನೆಮ್ಮದಿಗಾಗಿಯೇ. ಅದಕಾ"ಗಿ ಮಾನವ ಅಗತ್ಯವೆನಿಸಿದ ಭೌತಿಕ ಸಂಪತ್ತನ್ನೆಲ್ಲ ಕಂಡುಕೊಂಡ. ಒಂದು ವೇಳೆ ಈ ನೆಮ್ಮದಿ ಎನ್ನುವುದು ಭೌತಿಕ ಸಂಪತ್ತಿನಿಂದಲೇ ನಮಗೆ ದೊರೆಯುವುದಾಗಿದ್ದರೆ, ಈಗ ಜಗತ್ತಿನಲ್ಲಿ ಭೌತಿಕ ಸಂಪತ್ತಿಗೆ ಯಾವುದೇ ಕೊರತೆಯಿಲ್ಲ. ಆದರೂ ನೆಮ್ಮದಿಯಿಲ್ಲ. ಏಕೆ? ಇದಕೆ" ಕಾರಣ ನಮ್ಮ ನೈತಿಕ ದೌರ್ಬಲ್ಯ; ಪರಿಣಾಮದ ಆಸೆ-ಅಪೇಕ್ಷೆಗಳು. ಈ ಆಸೆ-ಅಪೇಕ್ಷೆಗಳ ಜನ್ಮಸ್ಥಳವೇ ಹೊರ ಜಗತ್ತು; ನಮ್ಮ ಹೊರನೋಟ. ಬಾಹ್ಯದ ಭೋಗ ವಸ್ತುಗಳು ಒಂದೂ ಶಾಶ್ವತ ಶಾಂತಿ ನೆಮ್ಮದಿಗಳನ್ನು ತಂದುಕೊಟ್ಟಿಲ್ಲ. ಅವುಗಳ ವಿಶೇಷವೆಂದರೆ, ಅವುಗಳನ್ನು ಬಳಸಿದಷ್ಟೂ ನಮ್ಮನ್ನು ಕೆರಳಿಸುತ್ತಲೇ ಹೋಗುತ್ತವೆ. ನಮ್ಮ ಬಯಕೆಯ ಬೆಂಕಿಗೆ ಆಜ್ಯ ಸುರಿಯುತ್ತಲೇ ಹೋಗುತ್ತವೆ. ಅವುಗಳನ್ನು ತೃಪ್ತಿಪಡಿಸಲಿಕಾ"ಗಿ ಏನೆಲ್ಲ ಹೋರಾಟ ನಡೆಸಬೇಕಾಗುತ್ತದೆ. ಆ ಹೋರಾಟದ ಭರದಲ್ಲಿ ನ್ಯಾಯ-ನೀತಿಗಳ ಲಕ್ಷ್ಯ ಇಲ್ಲವಾಗುತ್ತದೆ. ವ್ಯಕ್ತಿ ತನಗರಿವಿಲ್ಲದೆಯೇ ಹಾದಿ ಬಿಟ್ಟು ನಡೆಯತೊಡಗುತ್ತಾನೆ. ಅನುಕೂಲಕಾ"ಗಿ ನಡೆಸುವ ಅಂತಹ ಹೋರಾಟ ಪ್ರತಿಕೂಲಗಳನ್ನೇ ಎದುರಿಸಬೇಕಾಗುತ್ತದೆ. ಆಗ ಸಹಜವಾಗಿಯೇ ನೆಮ್ಮದಿ ಹಾಳಾಗುತ್ತದೆ. ಬದುಕಿನ ಉದ್ದೇಶ ನೆಮ್ಮದಿ ಕಳೆದುಕೊಳ್ಳುವುದಲ್ಲ. ಅದನ್ನು ಸಹಜವಾಗಿ ಅನುಭವಿಸುವುದು. ಈ ಹಿನ್ನೆಲೆಯಲ್ಲಿ ನಮಗಿರುವ ನೆಮ್ಮದಿಯ ಮಾರ್ಗವೆಂದರೆ ಆಧ್ಯಾತ್ಮ. ಈ 'ಆಧ್ಯಾತ್ಮ'ವನ್ನೇ ೧೨ನೆಯ ಶತಮಾನದ ಶರಣರು ಅದಕಿ"ಂತ ಧ್ವನಿಪೂರ್ಣವಾದ 'ಅನುಭಾವ' ಎಂದು ಕರೆದರು. ಈ ಎರಡೂ ಶಬ್ದಗಳು ಬೇರೆಯಲ್ಲ. ಒಂದು ಸಂಸ್ಕೃತ ಬಳಕೆ; ಮತ್ತೊಂದು ಕನ್ನಡದ ಬಳಕೆ ಅಷ್ಟೆ.

ಅನುಭಾವ ಎನ್ನುವುದು ಮತ್ತೇನೂ ಅಲ್ಲ. ವ್ಯಕ್ತಿಯ ನಿತ್ಯದ ಅನುಭವ ದಿವ್ಯಗೊಂಡಾಗ ಉಂಟಾಗುವ ಒಂದು ಸ್ಥಿತಿ. ಅದನ್ನು ಇಂಗ್ಲೀಷಿನಲ್ಲಿ **Devine Experience** ಅಥವಾ **Mystic Experience** ಎಂದು ಕರೆದಿದ್ದಾರೆ. ಅನುಭಾವಕೆ" ಅರ್ಥ ಹೇಳಲಾಗುವುದಿಲ್ಲ. ಅನುಭಾವಿಗಳೇ ಹೇಳುವಂತೆ ಅದು ಮೂಕ ಕಂಡ ಕನಸು. ಅದನ್ನು ಮೌನವೇ ಅರ್ಥೈಸಬೇಕು. ಅನುಭಾವ ಎಲ್ಲೋ ಇರುವ ಗುರಿಯಲ್ಲ. ಅದು ನಮ್ಮಲ್ಲೇ ಇರುವ ಅರಿವು. ಅದಕಾ"ಗಿ ಹೊರಗೆಲ್ಲೂ ಪ್ರಯಾಣ ಮಾಡಬೇಕಾಗಿಲ್ಲ. ನಾವು ಇದ್ದಲ್ಲಿಯೇ ಅದನ್ನು ಅನುಭವಿಸಬಹುದು. ಅದು ಅನ್ಯವಲ್ಲವೇ ಅಲ್ಲ. ಅದು ನಾವೇ; ನಮ್ಮ

ಅಸ್ತಿತ್ವವೇ. ಅದನ್ನು ಹುಡುಕುತ್ತ ಹೊರಗೆ ಹೋದರೆ ಅದರಿಂದ ನಾವು ದೂರ ದೂರ ಹೋದಂತೆ. ಹೊರಗೆ ಹುಡುಕುವ ಭರದಲ್ಲಿ ಒಳಗಿರುವುದನ್ನು ಕಳೆದುಕೊಳ್ಳುವ ಅರಿವೇ ನಮಗಿರುವುದಿಲ್ಲ.

ಅನುಭಾವ ಸಿದ್ಧಿಗೆ ಬೇಕಾಗಿರುವ ಮೊದಲ ಅರ್ಹತೆಯೆಂದರೆ ನಾವು ಸರಳಗೊಳ್ಳಬೇಕು. ಸಂಕೀರ್ಣತೆಯ ತೊಡಕುಗಳನ್ನು ಬಿಡಿಸಿಕೊಳ್ಳಬೇಕು. ನಮ್ಮ ಮನಸ್ಸಿನ ಅಸಂಗತ ಆಟಗಳನ್ನು ನಿಲ್ಲಿಸಬೇಕು. ನಾವು ಸುಮ್ಮನೆ ಮೌನವಾಗಿರುವುದನ್ನು ಕಲಿತರೂ ಸಾಕು. ಅರಿವಿನ ಅರಮನೆಯ ಬಾಗಿಲು ತನಗೆ ತಾನೇ ತೆರೆದುಕೊಳ್ಳುತ್ತದೆ. ಅನುಭಾವದ ಸಂವೇದನೆಯಾಗುತ್ತದೆ. ವಾಸ್ತವವಾಗಿ ಅದು ನಮಗಾಗಿಯೇ ಕಾಯುತ್ತಿರುತ್ತದೆ. ಸಣ್ಣ ದನಿಯಲ್ಲಿ ನಮ್ಮನ್ನು ಕರೆಯುತ್ತಿರುತ್ತದೆ. ಆದರೆ ನಮ್ಮ ಮನಸ್ಸು ಮಾಡುವ ಗದ್ದಲದಲ್ಲಿ ಆ ಮೃದು ಮಧುರ ದನಿ ಕೇಳಿಸುವುದೇ ಇಲ್ಲ. ನಮ್ಮ ಮನಸ್ಸು ಮಾರುಕಟ್ಟೆಯಾಗಿದೆ; ಚಿಂತೆಗಳ ಸಂತೆಯಾಗಿದೆ. ಜಗ್ಗಾಟದ ಜಾತ್ರೆಯಾಗಿದೆ; ಪಾತಕದ ಪಾತ್ರೆಯಾಗಿದೆ.

ಇಂದಿನ ಸಂಕೀರ್ಣ ಸನ್ನಿವೇಶದಲ್ಲಿ ನಮಗೆ ಅನುಭಾವ ಸಾಹಿತ್ಯ ಚಿಂತನೆ ಏಕೆ ಬೇಕಾಗಿದೆ ಎಂದರೆ, ನಮ್ಮ ಇಡೀ ವ್ಯವಸ್ಥೆಯೇ ನವಗ್ರಹ ಪೀಡೆಗೆ ಒಳಗಾಗಿದೆ. ಅಸಹನೀಯ ಹಿಂಸೆಯನ್ನು ಅನುಭವಿಸುತ್ತಿದೆ. ನಾನು ಹೇಳುವ ಈ ನವಗ್ರಹಗಳು ಶಾಸ್ತ್ರಪುರಣಾಗಳಲ್ಲಿ ಬರುವ ಜ್ಯೋತಿಷ್ಯರು, ಪುರೋಹಿತರು ಹೇಳುವ ನವಗ್ರಹಗಳಲ್ಲ; ನಾವೇ ಸೃಷ್ಟಿಸಿದ ಆಧುನಿಕ ನವಗ್ರಹಗಳು–

೧. ವ್ಯಕ್ತಿ ಚಾರಿತ್ರ್ಯದ ದಾರಿದ್ರ್ಯ –poverty of Personal character
೨. ಹಣ ಮತ್ತು ಅಧಿಕಾರದ ಹುಚ್ಚು – Madness after money & Power
೩. ನಿಸರ್ಗ ಸಂಪತ್ತಿನ ದುರ್ಬಳಕೆ – Misuse of Natural Resources
೪. ರಾಜಕೀಯ ಅನಾಯಕತ್ವ –Political anarchy
೫. ಧರ್ಮಾಂಧತೆಯ ದ್ವೇಷ –Religious enemity
೬. ಬುದ್ಧಿಜೀವಿಗಳ ದಡ್ಡತನ –Stupidity of intellectuals
೭. ಜಾಗತೀಕರಣದ ಜೂಜು –Gambling of Globalisation
೮. ಸಾಮಾನ್ಯ ಪ್ರಜ್ಞೆಯ ಕೊರತೆ –Lack of Common sense
೯. ಆಧ್ಯಾತ್ಮಿಕತೆಯ ಅವಜ್ಞೆ –Disregard towards Spirituality

ಈ ಗ್ರಹಗಳ ಶಾಂತಿಗೆ ನಡೆಯಬೇಕಾಗಿರುವುದು ಪೂಜೆಯಲ್ಲ; ಹೋಮ ಹವನಗಳಲ್ಲ, ವ್ರತನೇಮಗಳಲ್ಲ. ಬೇಕಾಗಿರುವುದು ಪೂರ್ಣ ಪರಿಶುದ್ಧ ಮನಸ್ಸು, ಪಾರದರ್ಶಕ ಹೃದಯ, ಪ್ರಾಮಾಣಿಕ ಬದುಕು. ಅದು ವಿನಃ ನಾವು ಎಷ್ಟೆಲ್ಲಾ ಭೌತಿಕ ಸಂಪತ್ತನ್ನು ಗಳಿಸಿದರೂ ಸಮಾಜದಲ್ಲಿ ಶಾಂತಿ, ನೆಮ್ಮದಿಗಳು ನೆಲೆಸಲು ಸಾಧ್ಯವಿಲ್ಲ. ವ್ಯಕ್ತಿಯ ಮನ ಪರಿವರ್ತನೆಯಾಗಬೇಕು; ಮೌನವಾಗಬೇಕು. ■

## ಪ್ರತಿಭಾ ದರ್ಶನ

ಬಾಲ್ಯದಲ್ಲಿ ಬರೆಯುತ್ತಿದ್ದೆ ಆಗಲಿಲ್ಲದು ಕವನ
ಇಂದು ಮನಬಿಚ್ಚಿ ಬರೆದೆ ಆಯಿತು ಕವನ
ಬರೆದ ಸಾಲ್ಗಳ ನಡುವೆ ಇದೆಯಂತೆ ಪ್ರತಿಭೆ
ನನಗೀಗ ಅದಕಂಡು ಅರಿಯಬೇಕಾಗಿದೆಯಲ್ಲ

*- ಡಾ. ಕರುಣಾಕರ್ ಎಸ್. ಶೆಟ್ಟಿ*

ಜೀವಿ ವಚನ–55

## ಚಿಂತಿ ಯಾಕ ಮಾಡತೀದಿ ಚಿನ್ಮಯನಿದ್ದಾನೆ'

1

ಚಿತೆ ಮತ್ತು ಚಿಂತೆ ಇವುಗಳಲ್ಲಿ ಬಿಂದು ಮಾತ್ರ ವ್ಯತ್ಯಾಸವಿದೆ ನೋಡಿ.
ಚಿತೆ ದೇಹವನ್ನು ಸುಟ್ಟರೆ, ಚಿಂತೆ ದೇಹವನ್ನೂ ಮನವನ್ನೂ ಸುಡುತ್ತದೆ.
ಚಂದ್ರನಂತೆ ಬೆಳಗುವ ಶಾಂತ ಮನಕ್ಕೆ ರಾಹುವಾಗಿ ಕಾಡುವುದು ಚಿಂತೆ.
ಹೆಚ್ಚಿನ ಕಾಯಿಲೆಯ ಮೂಲವೇ ಚಿಂತೆ, ಸುಖದ ನಿಜ ಶತ್ರುವೇ ಚಿಂತೆ.
ಚಿಂತಿ ಯಾಕ ಮಾಡತೀದಿ ಚಿನ್ಮಯನಿದ್ದಾನೆ ಎಂದು ಹಾಡಿ ದಾಸರು ನಿಶ್ಚಿಂತರಾದರು.

2

ಕಾಮದಿಂದ ಬರುವದು ಕ್ರೋಧ, ಕ್ರೋಧದಿಂದ ಬರುವದು (ಸಂ)ಮೋಹ
(ಸಂ)ಮೋಹದಿಂದ ಸ್ಮೃತಿಯ ವಿಭ್ರಮ, ಸ್ಮೃತಿಯ ಭ್ರಮೆಯಿಂದ ಬುದ್ಧಿನಾಶ
ಬುದ್ಧಿನಾಶದಿಂದ ಸರ್ವನಾಶ, ಎಲ್ಲಕ್ಕೆ ಮೂಲ ಚಿತ್ತಚಾಂಚಲ್ಯ, ಚಿಂತೆ.
ಕಾಮ, ಕ್ರೋಧ, ಲೋಭ ಇವುಗಳೆ ನರಕದ ಬಾಗಿಲು ಎಂದಿದೆ ಗೀತೆ.
ಎಲ್ಲ ಬಾಗಿಲುಗಳಿಗೆ ಬೀಗಹಾಕಲು ಬೇಕು ಯೋಗ , ಅದೇ ಚಿತ್ತವೃತ್ತಿನಿರೋಧ .

3

ಕಾಮ ಗೆದ್ದಾಗ ಕ್ರೋಧವಾಗಿ ಕಾಡಿತ್ತು ಮಾಯೆ, ಕ್ರೋಧ ಗೆದ್ದಾಗ
ಮೋಹವಾಗಿ ಕಾಡಿತ್ತು ಮಾಯೆ, ಮೋಹ ಗೆದ್ದಾಗ ಮದವಾಗಿ ಕಾಡಿತ್ತು ಮಾಯೆ.
ಮದವ ಗೆದ್ದಾಗ ಮತ್ಸರವಾಗಿ ಕಾಡಿತ್ತು ಮಾಯೆ, ಮತ್ಸರ ಗೆದ್ದಾಗ
ಅಹಂಕಾರದ ಹುತ್ತದಿಂದ ಹಾವಾಗಿ ಹೊರಬಂದಿತ್ತು ಮಾಯೆ,
ಅಹಂಕಾರ ಗೆದ್ದಾಗ ಬಂಧನ ಕಳಚಿತ್ತು, ಚಿಂತೆ ಹೋಗಿತ್ತು, ಶಾಂತಿ ನೆಲಸಿತ್ತು.

4

ಏಕಾಕಿಯಾಗಿ ಕುಳಿತಾಗ ನೆರಳಿನಂತೆ ಹಿಂಬಾಲಿಸುವುದು ಭೂತ, ಅದೆ ಚಿಂತೆ
ಸತ್ಸಂಗದ ಬೆಳಕಿನಲ್ಲಿ ನೆರಳು ಮಾಯವಾಗುವುದು, ಭೂತೋಚ್ಚಾಟನೆ ಆಗುವುದು.
ಧ್ಯಾನ ಪ್ರಾರ್ಥನೆ ಇರಲಿ, ಸದ್‌ಗ್ರಂಥಗಳ ಪಾರಾಯಣೆ ಇರಲಿ, ಸದ್‌ಭಕ್ತಿ ಇರಲಿ.
ಭಕ್ತಿಯಿರದ ಪ್ರಾರ್ಥನೆ ವಿಳಾಸವಿಲ್ಲದ ಪತ್ರದಂತೆ, ಮರಳಿ ನಿಮಗೇ ಬರುವುದದು!
ತ್ವರಿತ ಅಂಚೆ ಅಂದರೆ ಶ್ರದ್ಧೆ, ದೇವಗೆ ತಲುಪುವುದು: ಶ್ರದ್ಧಾವಾನ್ ಲಭತೇ ಜ್ಞಾನಂ .



– ಡಾ। ಜೀವಿ ಕುಲಕರ್ಣಿ
**(M: 9324242172)**

(ಸ್ವಾಮಿ ಜಗದಾತ್ಮಾನಂದರ 'ಬದುಕಲು ಕಲಿಯಿರಿ' ಅಧ್ಯಾ0ು ಮೂರರಿಂದ ಸ್ಫುರಿಸಿದ್ದು)

# ನಂಬಲಸಾಧ್ಯನಪ್ಪ, ಈ ವಿಶ್ವಾಸ

ನಮ್ಮ ವಿಶ್ವಾಸ ಯಾವಾಗ್ಲೂ ಹಾಗೇ
ಬರ್ತಾನೆ, ಹೋಗ್ತಾನೆ
ಬರ್ತಾ–ಹೋಗ್ತಾ ಇರ್ತಾನೆ
ಕುದುರೆ ಮೇಲೆ ಬರ್ತಾನೆ
ಕುದುರೆ ಮೇಲೆ ಹೋಗ್ತಾನೆ.

'ಇರೋ', ಅಂದ್ರೆ..
'ಹೋಗ್ಬರ್ತಿನಿ' ಅಂತಾನೆ
'ಇಲ್ಲೇ ಬಿದ್ದಿರ್ಬಾರದೇನೋ'. ಅಂದ್ರೆ
'ನಾ ಬಿದ್ರೆ ನಿಂಗೇ ಪೆಟ್ಟು'.
ಪಟ್ಟು ಹಿಡಿತಾನೆ ವಿಶ್ವಾಸ


ಶ್ವಾಸ ತಗೋಳೋಕ್ಕೂ ಟೈಮ್ ಇಲ್ಲ..
ವಿಶ್ವಾಸನಿಗೆ.
ಹೇಗೆ ಉಚ್ವಾಸ–ನಿಶ್ವಾಸ.
ಹಾಗೇ ಈ ವಿಶ್ವಾಸ
ಅನುಲೋಮ–ವಿಲೋಮ..

ಮುಂದಿನಿಂದ ಹಾರ ಹಾಕ್ತಾನೆ
ಹಿಂದಿನಿಂದ ಧಿಕ್ಕಾರ ಹಾಕ್ತಾನೆ
ತಲೆಯೇರಿದ ಬಿರುದೂ ಅವನೇ
ತಲೆಗೆ ಬಿದ್ದಬಿದ್ದಿರೊ ಅವನೇ..
ಎಲಾ ಇವನಾ!

'ನಂಬಿದರೆ ನಂಬಿ', ಅಂತಾನೆ
ನಂಬದಿರೆ 'ನಿಮ್ಮಿಷ್ಟ', ಅಂತಾನೆ
ನಂಬಿದಾಗ 'ಪಿಡ್ಜೋ' ಆಗ್ಬಿಡ್ತಾನೆ.
ಹಾಳಾಗಿ ಹೋಗಂದ್ರೆ..
ದಮ್ಮಯ್ಯಾಂತ ಬಡ್ಕೊಳ್ತಾನೆ


'ಯಾಕಪ್ಪಾ ಮೋಸ ಮಾಡ್ದೆ', ಅಂದ್ರೆ
'ಯಾಕಪ್ಪ ಮೋಸ ಹೋದೆ'
ಅಂತ ನನ್ನನ್ನೇ ಕೇಳ್ತಾನೆ;
'ನಂಬಿಕೆ ಇಟ್ಟಿದ್ನಲ್ಲ' ಅಂದ್ರೆ
'ಅದ್ಕೇ ಹೀಗಾಯ್ತಲ್ಲ', ಅಂತಾನೆ

'ನಂಬೋದು ತಪ್ಪೇನೋ, ವಿಶ್ವಾಸ?'
ಅಂತ ಕೇಳಿದ್ರೆ,
'ಆ ನಿನ್ನ ನಂಬಿಕೆಯನ್ನೇ ಕೇಳಿ ತಿಳ್ಕೊ.
ಅಥವಾ ನಂಬದವ್ರನ್ನ ಕೇಳ್ಕೊಂಡು',
ಅನ್ಬೇಕೆ ಆ ವಿಶ್ವಾಸ!
ಅಬ್ಬಾ! ಎಂತಹ
ಚರ್ವಿತ ಚರ್ವಣ'ವಿದು?!
ನಂಬಲಸಾಧ್ಯ!



– ಮನೋಹರ್ ನಾಯಕ್
(9820267025)
lingoindia@gmail.com

# ಬಾಳಿನ ಸಿಂಹಾವಲೋಕನ




✍ ಡಾ. ಜಿ. ಡಿ. ಜೋಶಿ

ಸಂಕಷ್ಟದ ಕತ್ತಲೆಯಲಿ ಮುಳುಗಿದಾಗ
ಎಂದು ಕಾಣುವೆ ಬೆಳಕೆಂದು ಹಂಬಲಿಸಿದಾಗ
ಗಾಢಾಂಧಕಾರದಲಿ ಬೆಳಕಿನ ತುಂಡು ಹೊಳೆಯಿತು
ಮಳೆಗಾಲದ ರಾತ್ರಿ ಮಿಂಚಿನ ಗೆರೆ ಸಂಚರಿಸಿದಂತೆ
ಹದಿರಹೆಯ ಕೊನೆಗೆ ನಸುಕಿನ ಬೆಳಕ ಕಾಣುತ
ಸಂತಸದಿ ಯೌವನದಿ ಹೂಡಿದೆನೆನ್ನ ಸಂಸಾರ
ಬೆಳೆಯಿತು ಸಂಸಾರ ಪೂರ್ವಾಹ್ನದ ಕಿರಣದಂತೆ
ಪಡೆಯುತಲಿ ಪುತ್ರರತ್ನಗಳೆರೆಡನು ತಡಮಾಡದೆ
ಸಾಹಿತ್ಯ ಶಿಕ್ಷಣ ಕ್ಷೇತ್ರಗಳಿ ನಾ ಮಾಡಿದ ಸೇವೆ
ಗುರುತಿಸಿದ ಸಮಾಜ ಮನ್ನಿಸಿ ಏರಿಸಿತೆನ್ನ ಸ್ಥಾನ
ಧನ್ಯತೆಯ ಭಾವ ಮೂಡಿಸುವ ತೆರದಿ ಮಾನ
ಸನ್ಮಾನಗಳ ಸುರಿಮಳೆ ಬಂತು ನಿವೃತ್ತಿಯ ದಿನ
ವೃತ್ತಿಯಿಂದ ನಿವೃತ್ತಿ ಪಡೆದಾಗ ಪ್ರವೃತ್ತಿ ಎದ್ದು
ನಿಂತು ಬೀಸಿತು ತನ್ನ ಚಾಟಿಯೇಟು ಎನುತ
ನಿನಗೀಗ ಸಾಕಷ್ಟು ಸಮಯವಿದೆ ಮಾಡಲು ನಿರತ
ಸಾಹಿತ್ಯ, ಸಮಾಜ, ಪ್ರತಿಭಾ ಪ್ರೋತ್ಸಾಹ ಕಾರ್ಯವ
ಪ್ರವೃತ್ತಿ ಚಾಟಿ ಏಟು ನಿಂತಿಲ್ಲ, ನಿಲ್ಲಬೇಕಾಗಿಲ್ಲ
ಅದೆನ್ನ ಕ್ರಿಯಾಶಕ್ತಿಯನೆಲ್ಲ ಪ್ರಾತ್ಸಾಹಿಸುತಿರಲಿ
ಶಕ್ತಿಮೀರಿ ದುಡಿಸುತಲೇ ನಿವೃತ್ತಿಕಾಲ
ಶಕ್ತಿಯನು ಕಂದಿಸಿತು, ಹಾಕಿತು ಬಾಧಗೆ ಶ್ರೀಕಾರ
ಹಿಂದೆ ಬಂದಿತ್ತು ಕನ್ನಡಕ ನಾಲ್ವತ್ತಕೆ ಏರಿತದು
ಮುಂದೆ ಐವತ್ತು ಕಂಡಾಗ ಹತ್ತಿರದ ದೃಷ್ಟಿಗೂ
ಅರವತ್ತಕೆ ಮಂಡೆ ನೋವು, ರಕ್ತದೊತ್ತಡ ಸ್ವಲ್ಪ
ಕಾಲು, ಸೊಂಟ ನೋವು ಕಾಯುತಿದ್ದವು ಎಪ್ಪತ್ತಕೆ.
ಇದ ಸಹಿಸುತ ಬಾಳು ಸಾಗಿತು ವೈದ್ಯರಾಸರೆಯಲಿ
ಎಂಬತ್ತಕೆ ಬಂದೆನು ಮಕ್ಕಳ ಮೊಮ್ಮಕ್ಕಳ ಪ್ರೀತಿಯೊಡನೆ
ನಡೆಯುತಿದೆ ಬಾಳು ಇನ್ನೂ ಊರುಗೋಲಿಲ್ಲದೆ.
ಆಗಾಗ ಕಂಡರೇನಂತೆ ಕುತ್ತಿಗೆ ನೋವು ಶೀತದೊಡನೆ
ರೂಢಿಯಾಗಿದೆ ಈಗ ಕಣ್ಣೊರಸಿ ನೋಡುವುದು
ಕೂದಲಿಲ್ಲದ ತಲೆಯ ಕೈಯಲಿ ನೇವರಿಸುವುದು
ಸಂಪೂರ್ಣ ಕತ್ತಲೆಯ ಸ್ವೀಕಾರಕೆ ಸಿದ್ಧತೆ ಮಾಡುವುದು
ನೋವ ಕಡಿಮೆ ಮಾಡುತ ಬರಲಿ ಎನಗೆ ಬಾಳಸಂಜೆ.

# ಕಾಳೆಸೆದ ಕೈ

ಎಸೆದ ಕಾಳು ತಿಂದ ಪಾರಿವಾಳ
ಅನಾಥ ಮಗುವ ನೋಡಿ ನಕ್ಕಿತು
ಬೆನ್ನಿಗತ್ತಿದ ರೊಟ್ಟಿಯಂತ ಹೊಟ್ಟೆ
ಪಾರಿವಾಳವನೇ ನೆಕ್ಕಿ ನಕ್ಕಿತು
ಎಂಜಲು ತಿಂದು ಬಿಸಾಕುವ ಗಾಳಿ
ಮಗುವಿನ ಮೂಗು ಹೊಕ್ಕು ನಕ್ಕೆ ನಕ್ಕಿತು
ಪಾರಿವಾಳಗಳ ಕಾಲಡಿ ಚೆಲ್ಲಿದ ರಾಶಿ ರಾಶಿ
ಧಾನ್ಯ ಕಂಡು ಹಬ್ಬವೂ ಮುಸಿ ಮುಸಿ ನಕ್ಕಿತು
ದಿಟ್ಟಿಸಿ ನೋಡುತ್ತಾ ನಿಂತ ಬೀದಿ ಸಂತಾನದ
ಬಾಯೊಳಗಿನ ಜೊಲ್ಲು ತಾಳಲಾರದೆ ನೆಲವ ನೆಕ್ಕಿತು
ಹಸಿವು ಗೆದ್ದವರ್ಯಾರು?
ಸಕಲ ಸಂತಾನದ ಮಗು ಬಡಬಡಿಸಿತು
ಕಾಳೆಸೆದ ಕೈ ಕಲ್ಲೆಸೆಯಿತು.



– ಡಾ. ಮರಿಯಪ್ಪ ನಾಟೇಕರ್

# ಭಾರತದ ಪ್ರಖ್ಯಾತ ಪತ್ರಕರ್ತ, ಕನ್ನಡದ ಕುವರ – ಡಾ.ಎಂ.ವಿ.ಕಾಮತ್

೧೪ನೆಯ ಆಗೋಸ್ತು, ೧೯೪೭, ಸಮಯ ರಾತ್ರಿ ೯–೩೦. ಸ್ಥಳ: ಬೊಂಬೆ ಸೆಕ್ರೆಟರೇಟ್‌ನ ಕಿಕ್ಕಿರಿದ ಸಭಾಂಗಣ... ತಮಗಾಗಿಯೇ ಕಾದಿರಿಸಲಾದ ಮುಂದಿನ ಸಾಲಿನಲ್ಲಿ ವಿರಾಜಮಾನರಾದ ಸ್ವಾಂತಂತ್ರ್ಯ ವೀರರು, ಹಿಂದಿನ ಸಾಲುಗಳಲ್ಲಿ ಭಾರತದ ನವನಿರ್ಮಾಣಕ್ಕಾಗಿ ಸೊಂಟ ಕಟ್ಟಿಕೊಂಡಂತಹ ಜೆ.ಆರ್.ಡಿ.ಟಾಟಾ ಮುಂತಾದ ಗಣ್ಯರು, ಹಾಗೂ ಇನ್ನಿತರು. ಒಂದರನಂತರ ಒಂದರಂತೆ ಹಾಡಲಾಗುತ್ತಿದ್ದ ದೇಶಭಕ್ತಿಯ ಗೀತೆಗಳನ್ನು ಆಲಿಸುತ್ತಾ, ಡವಗುಟ್ಟುವ ಎದೆಬಡಿತಗಳೊಂದಿಗೆ ಕ್ಷಣಗಳನ್ನೆಣಿಸುತ್ತಾ ಗಡಿಯಾರದ ಮುಳ್ಳುಗಳನ್ನು ದಿಟ್ಟಿಸುತ್ತಾ ಕುಳಿತಿದ್ದ ಆ ಕ್ಷಣ!!!! ಮಧ್ಯರಾತ್ರಿ ೧೧–೫೯ಕ್ಕೆ ಬ್ರಿಟಿಷ್ ಪತಾಕೆಯನ್ನು ಕೆಳಗಿಳಿಸಿ ಮೊತ್ತಮೊದಲಬಾರಿಗೆ ಭಾರತದ ತ್ರಿವರ್ಣ ಧ್ವಜಾರೋಹಣದ ಆ ಅವಿಸ್ಮರಣೀಯ ಚಿತ್ರಣವನ್ನು ಕಣ್ಗಳಲ್ಲಿ ತುಂಬಿಕೊಂಡ ಪುಣ್ಯಾತ್ಮರು!!!! ಸಭಾಂಗಣದಲ್ಲಿದ್ದ ಬೆರಳೆಣಿಕೆಯಷ್ಟು ವರದಿಗಾರರಲ್ಲಿ ನಮ್ಮವರೇ ಆದ ಎಂ.ವಿ.ಕಾಮತ್ ಕೂಡ ಒಬ್ಬರು. ೬೮ ವರ್ಷಗಳ ಹಿಂದಿನ ಆ ಕ್ಷಣಗಳನ್ನು ನೆನಪಿಸಿಕೊಳ್ಳುತ್ತಾ ನಿನ್ನೆತಾನೆ ನಡೆದ ಘಟನೆಯಂತೆ ಅತ್ಯಂತ ಉತ್ಸಾಹದಿಂದ ಹೇಳುವಾಗಿನ ಅವರ ಕಣ್ಣಿನ ಮಿಂಚು ಕಂಡು ನಮಗೂ



ರೋಮಾಂಚನವಾಗುತ್ತದೆ. ಕಣ್ಣುಗಳು ತುಂಬಿ ಬರುತ್ತವೆ. ಪ್ರಥಮ ಸ್ವಾತಂತ್ರ್ಯೋತ್ಸವವನ್ನು ಕಣ್ಣಾರೆ ಕಂಡು ಅದನ್ನು ವರದಿಯನ್ನು ಮಾಡಿದಂತಹ ಪತ್ರಕರ್ತರಲ್ಲಿ ಬಹುಷ ಎಂ.ವಿ.ಕಾಮತ್ ಅವರು ಮಾತ್ರ ಇಂದು ಜೀವಂತ ಇರುವವರು. ಪ್ರಥಮ ಸ್ವಾತಂತ್ರ್ಯ ದಿನಾಚರಣೆ ಮಾತ್ರವಲ್ಲದೆ, ನಾಥೂರಾಮ್ ಗೋಡ್ಸೆಯವರ ನ್ಯಾಯಾಂಗ ವಿಚಾರಣೆ ಹಾಗೂ ಭಾರತೀಯ ಸಂವಿಧಾನದ ರಚನೆಯ ಕುರಿತಾದ ವರದಿಗಳನ್ನು ಮಾಡುವ ಸುವರ್ಣಾವಕಾಶವನ್ನು ಕೂಡ ಇವರು ಪಡೆದಿದ್ದರು.

೯೩ರ ಹರೆಯದಲ್ಲಿಯೂ ತರುಣರನ್ನು ನಾಚಿಸುವ ಉತ್ಸಾಹದಿಂದ ಇಂದಿಗೂ ಕ್ರೀಯಾಶೀಲರಾಗಿರುವ ಮಾಧವ ವಿಠ್ಠಲ ಕಾಮತ್ ಅವರು ಉಡುಪಿಯಲ್ಲಿ ಸೆಪ್ಟೆಂಬರ್ ೭, ೧೯೨೧ರಲ್ಲಿ ಜನಿಸಿದರು. ಉಡುಪಿಯ ಓರ್ವ ಯುವಕ ಮುಂಬಯಿ ನೆಲದಲ್ಲಿ ತನ್ನ ಭವಿಷ್ಯದ ಏಳಿಗೆಯನ್ನು ಹುಡುಕುತ್ತಾ ಬಂದು, ವಿದ್ಯಾಭ್ಯಾಸವನ್ನು ಪೂರೈಸಿ ಉದರ ನಿರ್ವಹಣೆಗಾಗಿ ಕೆಮಿಸ್ಟ್ ಆಗಿ ದುಡಿದದ್ದು; ಮುಂದೆ 'ಫ್ರೀಪ್ರೆಸ್ ಜರ್ನಲ್' ಪತ್ರಿಕೆಯ



✍ ಡಾ.ಮಮತಾ ರಾವ್

ಮೂಲಕ ಭಾರತದ ಪ್ರಖ್ಯಾತ ಪತ್ರಕರ್ತನಾದುದು ಒಂದು ಸಾಹಸಗಾಥೆ. ಯಶಸ್ಸಿನ ಮೆಟ್ಟಲುಗಳನ್ನು ಒಂದೊಂದಾಗಿ ಏರುತ್ತಾ ಪಿಟಿಐ ವರದಿಗಾರನಾಗಿ ದೇಶವಿದೇಶಗಳಲ್ಲಿ ನೆಲೆನಿಂತು, ಹತ್ತು ವರ್ಷಗಳ ಕಾಲ(೧೯೬೯–೭೮) ಜಗತ್ತಿನ ದಿಗ್ಗಜರ ಸಹವಾಸದಲ್ಲಿದ್ದರೂ, ಅಮೇರಿಕನ್ ಕನ್ಯೆಯನ್ನು ಮದುವೆಯಾಗಿದ್ದರೂ ಎಂ.ವಿ.ಕಾಮತ್ ಅವರು ವಿದೇಶದಲ್ಲಿ ನೆಲೆಸಲಿಲ್ಲ. ಭಾರತಕ್ಕೆ ಮರಳಿ 'ಇಲಸ್ಟ್ರೇಟೆಡ್ ವೀಕ್ಲಿ' ಪತ್ರಿಕೆಯ ಸಂಪಾದಕ(೧೯೭೮–೮೧) ಸ್ಥಾನವನ್ನು ಅಲಂಕರಿಸಿ ಮುಂದೆ ೧೯೮೧ರಲ್ಲಿ ನಿವೃತ್ತಿಯನ್ನು ಹೊಂದಿದರು. ತಮ್ಮ ಖಚಿತ ನಿಲುವು, ವಸ್ತುನಿಷ್ಠ ಬರವಣಿಗಾಗಿ ಪತ್ರಿಕಾವಲಯದಲ್ಲಿ ಹಾಗೂ ಓದುಗರ ಹೃದಯದಲ್ಲಿ ಮನೆಮಾಡಿರುವ ಕಾಮತ್ ಅವರು ನಿವೃತ್ತಿಯ ನಂತರ ಸುಮಾರು ಐವತ್ತರಷ್ಟು ಪುಸ್ತಕಗಳನ್ನು ಬರೆದಿದ್ದಾರೆ. ೧೯೮೧ರಲ್ಲಿ ಪ್ರಸಾರ ಭಾರತಿಯ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದ ಎಂ.ವಿ.ಕಾಮತ್ ಅವರು, ಸಧ್ಯ ಮಣಿಪಾಲ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿಯ ಸಕ್ರಿಯ ಸದಸ್ಯರಾಗಿ ಹಾಗೂ ಮಣಿಪಾಲ ಇನ್ಸಿಟ್ಯೂಟ್ ಆಫ್ ಕಮ್ಯೂನಿಕೇಶನ್‌ನ ಗೌರವಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಉದಯವಾಣಿ ಪತ್ರಿಕೆಯ ರವಿವಾರ ಸಂಚಿಕೆಯೊಂದಿಗೆ ಕೆಲವು ಪ್ರಮುಖ ಪತ್ರಿಕೆಗಳಿಗೆ ಇಂದಿಗೂ ನಿಯಮಿತವಾಗಿ ಅಂಕಣಗಳನ್ನು ಬರೆಯುತ್ತಾ, ಬಿಡುವಿನ ಸಮಯದಲ್ಲಿ ಓದುತ್ತಾ ತಮ್ಮ ಕೆಲಸಗಳನ್ನೆಲ್ಲಾ ತಾವೇ ಮಾಡುತ್ತಾ, ಲವಲವಿಕೆಯಿಂದ ಬದುಕುತ್ತಾ ತಮ್ಮ ಬದುಕಿನ ಕುರಿತು ಸಂತೃಪ್ತ ಮನೋಭಾವವನ್ನು ಹೊಂದಿರುವ ಹಿರಿಯಜೀವಿ ಎಂ.ವಿ.ಕಾಮತ್.

ಭಾರತದ ೬೮ನೆಯ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಎಂ.ವಿ.ಕಾಮತ್ ಅವರೊಂದಿಗಿನ ಮಾತುಕತೆಯ ವಿವರಗಳು–

ಪ್ರಶ್ನೆ–ವಿಜ್ಞಾನದ ವಿದ್ಯಾರ್ಥಿಯಾಗಿದ್ದು, ಡಾಕ್ಟರಾಗಬೇಕೆಂದು ಬಯಸುತ್ತಿದ್ದವರು ಭಾರತದ ಅದ್ವಿತೀಯ ಪತ್ರಕರ್ತರಾದ ಕುರಿತು ಹೇಳುತ್ತೀರಾ?

ಉತ್ತರ– ಬಾಲ್ಯದಿಂದಲೇ ಡಾಕ್ಟರಾಗಬೇಕೆಂಬಾಸೆ ನನಗಿತ್ತು. ಉಡುಪಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಓದಿ, ಮುಂದೆ ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ವಿದ್ಯಾಭ್ಯಾಸವನ್ನು ಮುಗಿಸಿದೆನು. ಹೆಚ್ಚಿನ ಶಿಕ್ಷಣಕ್ಕಾಗಿ ೧೯೩೯ರಲ್ಲಿ ಮುಂಬಯಿಗೆ ನನ್ನಣ್ಣನಲ್ಲಿಗೆ ಬಂದೆನು. ವೈದ್ಯಕೀಯ ಆಯ್ಕೆಯ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿದ್ದೆ. ಆದರೆ ಮದ್ರಾಸ್ ಪ್ರೆಸಿಡೆನ್ಸಿನಲ್ಲಿದ್ದ ಮಂಗಳೂರು ಕಾಲೇಜಿನಿಂದ ಬಾಂಬೆ ಪ್ರೆಸಿಡೆನ್ಸಿಗೆ ವರ್ಗಾವಣೆ ಮಾಡಲು ಬೇಕಾದ ಮೂರು ಸಾವಿರ ರೂಪಾಯಿಗಳನ್ನು ಆ ಕಾಲದಲ್ಲಿ ಹೊಂದಾಯಿಸಲು ಅಶಕ್ಯವಾದ ಕಾರಣ ನನ್ನಾಸೆ ಈಡೇರಲಿಲ್ಲ. 'ಇನ್ನೇನು ಮಾಡುತ್ತೀಯಾ' ಎಂದು ಅಣ್ಣ ಕೇಳಿದಾಗ, 'ತತ್ವಜ್ಞಾನದಲ್ಲಿ ಅಥವಾ ಸಾಹಿತ್ಯದಲ್ಲಿ ಬಿ.ಎ.ಆನರ್ಸ್ ಮಾಡುತ್ತೇನೆ' ಎಂದೆ. ಆಗ ಅವನು 'ಛೆ. ಎಲ್ಲಾದರೂ ಉಂಟೇ? ಆ ಡಿಗ್ರಿಗೆ ನಿನಗೆ ಯಾರು ಕೆಲಸಕೊಡುತ್ತಾರೆ? ನೀನು ಬಿ.ಎಸ್ಸಿ ಮಾಡು' ಎಂದ. ಅಂತೆಯೇ ನಾನು ಸೇಂಟ್ ಕ್ಸೇವಿಯರ್ಸ್ ಕಾಲೇಜಿನಲ್ಲಿ ಕೆಮಿಸ್ಟ್ರೀ ಮತ್ತು ಫಿಸಿಕ್ಸ್‌ನಲ್ಲಿ

ಪದವಿ ಪಡೆದೆನು.

{ಮದ್ರಾಸ್‌ನಲ್ಲಿ ಗಣಿತಪಠ್ಯದಲ್ಲಿ ಇಲ್ಲದ ಕ್ಯಾಲ್‌ಕುಲಸ್‌ನ್ನು ಅರ್ಥೈಸಲಾಗದೆ ಒದ್ದಾಡುತ್ತಿದ್ದ ಕ್ಷಣಗಳನ್ನು ಜ್ಞಾಪಿಸುತ್ತಾ ವಿದ್ಯಾರ್ಥಿ ಜೀವನದ ಒಂದು ಮಹತ್ವದ ಘಟನೆಯನ್ನು ಹೇಳಿದರು. ಫಿಸಿಕ್ಸ್ ಪ್ರಾಕ್ಟಿಕಲ್ ಸಮಯ; ಅವರ ಟೇಬಲ್ ನಲ್ಲಿದ್ದ ತೂಕದ ಯಂತ್ರ ಸರಿಯಾಗಿರಲಿಲ್ಲ. ಆದರೂ ಬೇರೆ ಯಂತ್ರವನ್ನು ಉಪಯೋಗಿಸಲು ಅವಕಾಶ ನೀಡದ ಶಿಕ್ಷಕರೊಬ್ಬರು ತಾವು ಹೇಳುವ ತೂಕವನ್ನು ಬರೆಯಲು ಹೇಳಿದರು. ಶಿಕ್ಷಕರ ಮಾತುಗಳನ್ನು ಒಪ್ಪಿ ಅದರಂತೆಯೇ ಮಾಡುತ್ತಿದ್ದರೆ ಬಹುಶ ಅವರು ಆ ಪರೀಕ್ಷೆಯನ್ನು ಪಾಸು ಮಾಡುತ್ತಿದ್ದರು. ಆದರೆ ಕಾಮತ್‌ರು ಹಾಗೆ ಮಾಡಲಿಲ್ಲ. ಶಿಕ್ಷಕರಿಗೆ 'ನಾನು ಪರೀಕ್ಷಾ ಅಭ್ಯರ್ಥಿ. ಪರೀಕ್ಷೆ ನಡೆಯಬೇಕಾದದ್ದು ನನ್ನದು' ಎಂದು ಹೇಳುವ ದಾರ್ಷ್ಟ್ಯವನ್ನು ತೋರಿಸಿದ ಕಾರಣ ಆ ವಿಷಯದಲ್ಲಿ ನಾಪಾಸಾಗಿ ಪುನಃ ಪರೀಕ್ಷೆ ಬರೆಯಬೇಕಾಯಿತು. ಅದನ್ನು ನೆನೆಸಿಕೊಂಡರೆ ತಮ್ಮ ಅಂತಃಸಾಕ್ಷಿಯನ್ನು ಕಾಯ್ದುಕೊಂಡ ಆ ಕ್ಷಣ ಅವಿಸ್ಮರಣೀಯವಾದುದು; ಮುಂದಕ್ಕೂ ಅವರ ಬಾಳಿನಲ್ಲಿ ಯಾವುದೇ ನಿರ್ಧಾರವನ್ನು ಕೈಗೊಳ್ಳುವಲ್ಲಿ ದೃಢತೆಯನ್ನು ಮೂಡಿಸಿದ ಆ ಕ್ಷಣ! ಅಂದಿನ ತಮ್ಮ ಸಮಯಪ್ರಜ್ಞೆ ಹಾಗೂ ದಿಟ್ಟತನ ಇಂದಿಗೂ ಆಶ್ಚರ್ಯವೆನಿಸುತ್ತದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.)

ಕೆಮಿಸ್ಟ್ ಆಗಿ ಕೇವಲ ಹದಿನಾರು ರೂಪಾಯಿಯ ಸಂಬಳದಲ್ಲಿ ಕೆಲಸವನ್ನಾರಂಭಿಸಿ ನಾಲ್ಕು ವರ್ಷಗಳಲ್ಲಿ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಪದವಿಯನ್ನಲಂಕರಿಸಿದ್ದೆ. ನಡು ನಡುವೆ ಪತ್ರಿಕೆಗಳಿಗೆ ಬರೆಯುವ ಹವ್ಯಾಸವನ್ನು ಬೆಳೆಸಿಕೊಂಡ ನಾನು ಮುಂದಿನ ನಾಲ್ಕೇ ತಿಂಗಳಲ್ಲಿ ಜನರಲ್ ಮ್ಯಾನೇಜರ್ ಆಗುವ ಅವಕಾಶವಿದ್ದರೂ ಅಲಕ್ಷಿಸಿ ರಾಜೀನಾಮೆಯನ್ನು ನೀಡುವ ದುಃಸಾಹಸವನ್ನು ಮಾಡಿದೆನು. ನೆಹರೂ ಅವರು ಹೇಳಿರುವ ನನಗೆ ಪ್ರಿಯವಾದ ಒಂದು ಮಾತು ಇಂತಿದೆ– **'Success often comes to those who dares and acts. It seldom comes to timid.'** ಪತ್ರಿಕೋದ್ಯಮ ಅಂದರೆ ಕೆಮಿಸ್ಟ್ ಕೆಲಸದಂತಲ್ಲ ಎಂದು ಹೇಳಿದ ಫ್ರೀಪ್ರೆಸ್ ಜರ್ನಲ್‌ನ ಸಂಪಾದಕ ಸದಾನಂದ ಅವರ ಆಹ್ವಾನವನ್ನು ಸ್ವೀಕರಿಸಿ ಆರು ತಿಂಗಳಕಾಲ ವರದಿಗಾರನಾಗಿ ಸೇರಿಕೊಂಡೆನು. ಆರುತಿಂಗಳ ನಂತರ ಕೆಲಸ ಸರಿಯಿಲ್ಲದಿದ್ದರೆ ವಜಾಮಾಡುತ್ತೇನೆ ಎಂದ ಸಂಪಾದಕರ ಸ್ಥಾನವನ್ನೇ ಮುಂದಕ್ಕೆ ಅಲಂಕರಿಸಿ ಅತ್ಯಂತ ಕಡಿಮೆಪ್ರಾಯದ ಸಂಪಾದಕನಾಗಿ ಗುರುತಿಸಲ್ಪಟ್ಟೆನು. ಮುಂದಕ್ಕೆ, ಸ್ವಾತಂತ್ರ್ಯೋತ್ಸವ, ಗೋಡ್ಸೆ ವಿಚಾರಣೆ ಇತ್ಯಾದಿ ನನ್ನ ಮಡಿಲಿಗೆ ಅನಾಯಾಸವಾಗಿ ಬಂದವು. ನನ್ನ ಜನನ ಸರಿಯಾದ ಸಮಯದಲ್ಲಾಯಿತು. **I was at the right place and at the right time.**

ಪ್ರಶ್ನೆ– ನೀವು ಗಮನಿಸಿದಂತೆ ಮುಂಬಯಿಯಲ್ಲಿ ಕನ್ನಡದ ಚಟುವಟಿಕೆಗಳು ಹೇಗಿದ್ದವು?

ಉತ್ತರ– ಆಗ ನಾಲ್ಕು ಕನ್ನಡ ರಾತ್ರಿಶಾಲೆಗಳಿದ್ದವು. ನಾನು ಸಂಜೆಯ ವೇಳೆ ಬಿಡುವಾಗಿದ್ದ ಕಾರಣ ಗೆಳೆಯನೊಬ್ಬನ ಸಲಹೆಯ ಮೇರೆಗೆ ಬೊಂಬೆ ನೈಟ್ ಹೈಸ್ಕೂಲಿಗೆ ಕಲಿಸಲು ಹೋಗುತ್ತಿದ್ದೆ. ಆನಂತರ ಪತ್ರಿಕೋದ್ಯಮದಲ್ಲಿ ತೊಡಗಿದ ಕಾರಣ ಏನೂ ಸಮಯಾವಕಾಶ ಸಿಗದಂತಾಯಿತು. ಕೆಲವು ಕಾಲಾನಂತರ ಸದಾನಂದ ಅನ್ನುವ ಹುಡುಗ ನನ್ನನ್ನರಸಿಕೊಂಡು ಬಂದು ಕಾಲಿಗೆ ನಮಸ್ಕರಿಸಿ ನಾನು ನಿಮ್ಮ ತರಗತಿಯ ವಿದ್ಯಾರ್ಥಿಯೆಂದಾಗ ನನಗೆ ಆಶ್ಚರ್ಯವಾಯಿತು. ಆತ ಫೋರೇಸ್ ಕಂಪನಿಯಲ್ಲಿ ದೊಡ್ಡ ಹುದ್ದೆಯಲ್ಲಿದ್ದ. ನಾನು ಯಾವ ಫಲಾಕಾಂಕ್ಷೆಯಿಲ್ಲದೆ ಮಾಡಿದ, ನನಗೆ ಖುಷಿ ಕೊಟ್ಟ ಕೆಲಸವದು.

ಪ್ರಶ್ನೆ– ಮುಂಬಯಿಯಿಂದ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದ್ದ 'ನುಡಿ' ಪತ್ರಿಕೆಯ ಕುರಿತು ನಿಮ್ಮ ಅನುಭವಗಳನ್ನು ಹೇಳುತ್ತೀರಾ?

ಉತ್ತರ–ನಾವೆಲ್ಲ ಯುವಕರು ಸೇರಿ 'ನುಡಿಕೂಟ'ವನ್ನು ನಡೆಸುತ್ತಿದ್ದೆವು. ಸ್ವಾತಂತ್ರ್ಯ ಸಿಕ್ಕ ಸಂದರ್ಭದಲ್ಲಿ ಸಮಾಜಕ್ಕೆ, ನಾಡಿಗೆ ನಮ್ಮ ಕೊಡುಗೆಯೇನಾದರೂ ನೀಡಬೇಕೆನ್ನುವ ಉತ್ಸಾಹದಲ್ಲಿ 'ನುಡಿ' ಪತ್ರಿಕೆಯನ್ನು ಪ್ರಾರಂಭಿಸಿದೆವು. ವ್ಯಾಸರಾವ್ ಬಲ್ಲಾಳ, ಹನುಮಂತ ಆಚಾರ್ಯ, ರಾಮಚಂದ್ರ ಉಚ್ಚಿಲ್ ಮುಂತಾದವರೊಂದಿಗೆ ನಾನೂ ಕೂಡ ಸಾಧ್ಯವಾದಷ್ಟು ಹಣ ವಂತಿಗೆ ಹಾಕಿ 'ನುಡಿ' ಪತ್ರಿಕೆಯನ್ನು ಪ್ರಕಟಿಸಿದೆವು. ಉಳಿದ ಸದಸ್ಯರು ಆ ಪತ್ರಿಕೆಗಳನ್ನು ಓದುಗರಿಗೆ ಹಂಚುವ ಜವಬ್ದಾರಿಯನ್ನು ವಹಿಸಿಕೊಂಡರು. ಆಗ ನಾನು ಕನ್ನಡದಲ್ಲಿಯೇ ಬರೆಯುತ್ತಿದ್ದೆ. ದೆಹಲಿಗೆ ನನ್ನ ಬದಲಿಯಾದರೂ ಅಲ್ಲಿಂದ ಲೇಖನಗಳನ್ನು ಬರೆದು ಕಳುಹಿಸುತ್ತಿದ್ದೆ. ಬಿಚ್ಚುನುಡಿಯ ರಾಜಕೀಯ ಅಗ್ರಲೇಖನ, ಇತರ ಮೌಲ್ಯಯುಕ್ತ ಸಾಹಿತ್ಯದಿಂದಾಗಿ ಉತ್ತಮವಾದ ಪತ್ರಿಕೆಯೆಂದು ಗುರುತಿಸಲ್ಪಟ್ಟು ಬಹಳ ಜನಪ್ರಿಯತೆಯನ್ನು ಪಡೆಯಿತು. ಮುಖ್ಯಮಂತ್ರಿಗಳೂ ಕೂಡ 'ನುಡಿ'ಪತ್ರಿಕೆಯ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದ್ದು ಅದರ ಸಫಲತೆಯ ಲಕ್ಷಣ. ಆದರೆ ಹಣದ ಅಭಾವ ನಮ್ಮನ್ನು ಸದಾ ಕಾಡುತ್ತಿತ್ತು. ಮೂರು ವರ್ಷಗಳ ನಂತರ ಆರ್ಥಿಕ ಕಾರಣಗಳಿಂದಾಗಿ 'ನುಡಿ' ಪತ್ರಿಕೆ ನಿಂತು ಹೋಯಿತು. ಕೊನೆಗೆ ಸಾಲದ ಮೊತ್ತವನ್ನು ನಾವೆಲ್ಲ ಸದಸ್ಯರು ಕೂಡಿ ನಮ್ಮ ಸೀಮಿತ ಆದಾಯದಿಂದಾಗಿ ಕಂತು–ಕಂತುಗಳಲ್ಲಿ ನೀಡಬೇಕಾಗಿ ಬಂತು. ನಮ್ಮ ಬಿಡುವಿನ ವೇಳೆಯಲ್ಲಿ ಸಮಾಜಕ್ಕೆ, ದೇಶಕ್ಕೆ ನಮ್ಮದೇನಾದರೂ ಕೊಡುಗೆಯನ್ನು ನೀಡಬೇಕು ಎನ್ನುವ ಉದ್ದೇಶದಿಂದ ನಾವು ಮಾಡಿದ ಕೆಲಸವು ನಮಗೆ ತೃಪ್ತಿಯನ್ನು ನೀಡಿದೆ. ನಾನು ಕನ್ನಡದಲ್ಲಿ ಬರೆಯುವ ಅಭ್ಯಾಸ ಮಾತ್ರ 'ನುಡಿ'ಪತ್ರಿಕೆಯ ನಂತರ ನಿಂತುಹೋಯಿತು.

ಪ್ರಶ್ನೆ– ನಿಮ್ಮ ವೃತ್ತಿಜೀವನದಲ್ಲಿ ನಿಮ್ಮನ್ನು ಪ್ರಭಾವಿಸಿದ ಘಟನೆಯ ಕುರಿತು ಹೇಳುತ್ತೀರಾ?

ಉತ್ತರ– ಬಹಳ ಇವೆ.... UN ನಲ್ಲಿದ್ದಾಗ ನಾನು ಪೋರ್ತುಗಲ್‌ನ ಮುಖ್ಯಮಂತ್ರಿಯವರನ್ನು ಭೇಟಿಯಾಗಿದ್ದೆ. ಅವರ ಸಂದರ್ಶನ ನಡೆಸಿದಾಗ ಅವರು ನನ್ನನು 'ನೀವು ಪೋರ್ತುಗಲ್‌ಗೆ ಬಂದಿದ್ದೀರಾ?' ಎಂದು ಕೇಳಿದರು. 'ಹೌದು ಸರ್, **but I almost got arrested sir**' ಎಂದೆ. ಅವರಿಗೆ ಆಶ್ಚರ್ಯವಾಯಿತು. ಆಗ ನಾನು ನಡೆದ ಘಟನೆಯನ್ನು ವಿವರಿಸಿದೆ. ನಾನು ಪ್ರಯಾಣಿಸುತ್ತಿದ್ದ ವಿಮಾನವೊಮ್ಮೆ ಇಸ್ಬನ್ ವಿಮಾನ ನಿಲ್ದಾಣದಲ್ಲಿ ಎರಡುಗಂಟೆ ತಂಗಿತ್ತು. ಆ ಕಾಲದಲ್ಲಿ ಭಾರತೀಯರಿಗೆ ಪೋರ್ತುಗಲ್‌ಗೆ ಹೋಗಲು ವೀಸಾ ಸಿಗುತ್ತಿರಲಿಲ್ಲ. ನನಗೋ ಹೊರಗೆ ಸ್ವಲ್ಪ ಸುತ್ತಾಡಿಕೊಂಡು ಬರುವಾಸೆ. ಅಧಿಕಾರಿಗಳಿಗೆ ವಿನಂತಿಸಿದಾಗ ಅವರು ನಿರಾಕರಿಸಿದರಲ್ಲದೆ ನನ್ನ ಹಿಂದೆ ಸೆಕ್ಯೂರಿಟಿ ಗಾರ್ಡ್‌ನ್ನು ನೇಮಿಸಿದರು. ಆತ ನಾನು ಶೌಚಾಲಯಕ್ಕೆ ಹೋದಾಗಲೂ ಹಿಂಬಾಲಿಸುತ್ತಿದ್ದ. ಕೊನೆಗೆ ವಿಮಾನವನ್ನೇರಿಸಿ ನನ್ನ ಸೀಟುಬೆಲ್ಟು ಕಟ್ಟಿ, ಅಷ್ಟರವರೆಗೆ ತನ್ನಲ್ಲಿದ್ದ ನನ್ನ ಪಾಸ್ ಪೋರ್ಟು ನನ್ನ ಕೈಯಲ್ಲಿತ್ತು, **'come again sir'** ಅಂದ. ಅದನ್ನು ಕೇಳಿ ಅವರು 'ಕಾಮತ್ ನೀವು ಅರೆಸ್ಟ್ ಆಗುತ್ತಿದ್ದರೆ ಚೆನ್ನಾಗಿತ್ತು' ಅಂದರು. ನಾನು ಬೆಚ್ಚಿಬಿದ್ದು 'ಅದ್ಯಾಕೆ ಸರ್' ಎಂದೆ. ಅದಕ್ಕವರು 'ನಾನೂ ಆ ಸಂದರ್ಭದಲ್ಲಿ ಪೋರ್ತುಗಲ್‌ನ ಜೈಲಿನಲ್ಲಿದ್ದೆ. ನೀವು ಅರೆಸ್ಟ್ ಆಗುತ್ತಿದ್ದರೆ ಒಳ್ಳೆಯ ಕಂಪನಿ ಸಿಗುತ್ತಿತ್ತು' ಎಂದು ನಕ್ಕರು. ಮುಂದೆ ಅವರಿಚ್ಛೆಯಂತೆ ನಾನು UN ಮೂಲಕ ಅವರಿಗೆ ಭಾರತದ ವೀಸಾ ದೊರಕಿಸಿ ಕೊಟ್ಟಿದ್ದೆ. ಆ ಮಹಾನುಭಾವರು ಗೋವಾದಲ್ಲಿರುವ ಪೋರ್ತುಗೀಸರ ಅರಮನೆಯನ್ನು ಸಮೀಪಿಸಿದಾಗ ಕಾರಿನಿಂದ ಕೆಳಗಿಳಿದು ಶೂ ಬಿಚ್ಚಿಟ್ಟು ನೂರು ಮೀಟರು ದೂರದವರೆಗೆ ಬರಿಕಾಲಲ್ಲಿ ನಡೆದರು.

ಅವರನ್ನು ಪ್ರಶ್ನಿಸಿದಾಗ 'ನನಗೆ ಭಾರತದ ಪವಿತ್ರ ಮಣ್ಣಿನ ಸ್ಪರ್ಶ ಬೇಕಿತ್ತು' ಅಂದರು. ಈ ಪ್ರಸಂಗ ನನ್ನನ್ನು ತುಂಬಾ ಪ್ರಭಾವಿಸಿತು.

ಇನ್ನೊಂದು... ಮುಂಬಯಿಯಲ್ಲಿ ನಾನು ಪತ್ರಕರ್ತನಾಗಿದ್ದ ದಿನಗಳು. ಆದಿನಗಳಲ್ಲಿ ಜಯಪ್ರಕಾಶ ನಾರಾಯಣ ಅವರು ನನ್ನ ಆಪ್ತರಾಗಿದ್ದರು. ಮುಂಬಯಿಗೆ ಬಂದಾಗೆಲ್ಲ ನಾನು ಮತ್ತಿಬ್ಬರು ಪತ್ರಕರ್ತ ಮಿತ್ರರೊಂದಿಗೆ ಜೆ.ಪಿ. ಅವರು ಗಂಟೆಗಟ್ಟಲೆ ರಾಜಕೀಯ ವಿಷಯಗಳ ಕುರಿತು ಮಾತನಾಡುತ್ತಿದ್ದರು. ಎಲ್ಲವೂ **off the record** ಆಗಿರುತ್ತಿತ್ತು. ಮಾತುಮಾತಿನಲ್ಲಿ ಜೆ.ಪಿ.ಯವರೊಮ್ಮೆ ನೆಹರೂ ತಮಗೆ ಮಂತ್ರಿಪದವಿ ನೀಡಿದ್ದು, ತಾನು ಅದನ್ನು ನಿರಾಕರಿಸಿದ ವಿಷಯವನ್ನು ತಿಳಿಸಿದರು. ನಾನು ಆ ಸುದ್ದಿಯನ್ನು ಬಹಿರಂಗ ಗೊಳಿಸಿದೆ. ನಾನು ವಿಶ್ವಾಸದ್ರೋಹ ಮಾಡಿದೆ ಎಂದು ಸಿಟ್ಟಾದ ಜೆಪಿಯವರು ನನ್ನೊಡನೆ ಎರಡು ವರ್ಷಗಳ ತನಕ ಮಾತಾಡಲಿಲ್ಲ. ನನ್ನಲ್ಲಿರುವ ಪತ್ರಕರ್ತನಿಗೆ ಇದೊಂದು ಬಹುಮುಖ್ಯ ವಿಷಯವಾಗಿ ಕಂಡಿತ್ತು. ಭಾರತದ ಜನತೆಗೆ ಇದನ್ನು ತಿಳಿಸುವುದು ನನ್ನ ಕರ್ತವ್ಯ ಎಂದು ನಾನು ಆ ರೀತಿ ಮಾಡಿದ್ದೆ. ಧರ್ಮಸಂಕಟ ಎಂದರೇನೆನ್ನುವುದು ಈ ಘಟನೆಯಿಂದ ನನಗರಿವಾಯಿತು. ಮುಂದೆ ಜೆ.ಪಿ.ಯವರು ಅನಾರೋಗ್ಯದಿಂದ ಇದ್ದಾಗ ಸಿಯಾಟೆಲ್‌ಗೆ ಚಿಕಿತ್ಸೆಗಾಗಿ ಬರುವ ಸುದ್ದಿ ತಿಳಿದು ಅಲ್ಲಿಗೆ ಧಾವಿಸಿ ಪ್ಲೇನ್‌ನಿಂದಿಳಿದ ಕೂಡಲೇ ಭೇಟಿ ಮಾಡಿ ನಮ್ಮ ಮಿತ್ರತ್ವವನ್ನು ಪುನಶ್ಚೇತನಗೊಳಿಸಿದೆನು. ನನ್ನ ವೃತ್ತಿಗೆ ನಾನು ದ್ರೋಹಬಗೆಯಲಿಲ್ಲ ಎನ್ನುವ ತೃಪ್ತಿ ನನಗಿದೆ.

ತನ್ನನು ತಾನು ಸಾಧಾರಣ ವರದಿಗಾರನೆಂದೇ ತಿಳಿಯುವ ವಿನಯಶೀಲ ವ್ಯಕ್ತಿತ್ವದ ಎಂ.ವಿ.ಕಾಮತ್ **UN** ನಲ್ಲಿದ್ದಾಗ ಜಗತ್ತಿನ ಎಲ್ಲಾ ಪ್ರಮುಖ ಮುಖಂಡರನ್ನು ಭೇಟಿಯಾಗುವ ಸಂದರ್ಶಿಸುವ ಸುವರ್ಣಾವಕಾಶವನ್ನು ಪಡೆದಿದ್ದರು. ಆದರೆ ಅದರ ಕುರುಹಿನ ಒಂದೇ ಒಂದು ಫೋಟೋಗಳನ್ನು ತಾನು ಕಾದಿರಿಸಲೆ ಇಲ್ಲ ಎಂದು ಹೇಳಿಕೊಳ್ಳುವಾಗ ಅವರ ಮಾತುಗಳಲ್ಲಿ ನಿರಾಶೆ ಇಣುಕುತ್ತಿತ್ತು. ಮಾತ್ರವಲ್ಲ ತಾನು ವರದಿ ಮಾಡಿದ ಭಾರತದ ಪ್ರಥಮ ಸ್ವಾತಂತ್ರ ದಿನಾಚರಣೆಯ ಐತಿಹಾಸಿಕ ವರದಿಯ ಪ್ರತಿಯೂ ತನ್ನಲ್ಲಿಲ್ಲ; ಫ್ರೀಪ್ರೆಸ್‌ಗೆ ತಗುಲಿದ ಬೆಂಕಿಯಲ್ಲಿ ಎಲ್ಲವೂ ನಾಶವಾಯಿತು ಎನ್ನುವ ನೋವು ಅವರನ್ನು ಕಾಡುತ್ತದೆ. ಎಂ.ವಿ.ಕಾಮತ್ ಅವರನ್ನು ಎರಡು ತಿಂಗಳ ಹಿಂದೆ ಗೋವಾದ ಗವರ್ನರ್ ಹುದ್ದೆಯನ್ನು ವಹಿಸುವಂತೆ ಬಹಳ ಒತ್ತಾಯಿಸಲಾಯಿತು. ಆದರೆ ತಮ್ಮ ಇಳಿವಯಸ್ಸಿನ ಕಾರಣವನ್ನಿತ್ತ ಅವರು ಅದನ್ನು ನಯವಾಗಿ ನಿರಾಕರಿಸಿದರು. ಇಂದು ಪತ್ರಿಕೋದ್ಯಮ ಡಿಜಿಟಲೈಸ್ ಆಗಿದ್ದರೂ ಅವರು ಮಾತ್ರ ಇಂದಿಗೂ ತಮ್ಮ ಟೈಪ್ ರೈಟರನಲ್ಲಿಯೇ ಅಂಕಣಗಳನ್ನು ಟೈಪ್ ಮಾಡುತ್ತಾರೆ. ಕಳೆದೈದಾರು ದಶಕಗಳಿಂದ ಅವರು ಹೋದಲ್ಲೆಲ್ಲಾ ಅವರೊಂದಿಗಿದ್ದು ಪ್ರತಿಕ್ಷಣ ಅವರ ಸಾನಿಧ್ಯವನ್ನು ಪಡೆದ ಆ ಟೈಪ್ ರೈಟರ್ ನನ್ನ ಪ್ರೇಯಸಿ ಎಂದು ಹೇಳಿ ಕಾಮತ್ ತುಂಟನಗು ಬೀರುತ್ತಾರೆ. ಇಂದಿಗೂ ನಿಯಮಿತವಾಗಿ ಪತ್ರಿಕೆಗಳನ್ನು ಓದುವ, ಮೂರ್ನಾಲ್ಕು ಪತ್ರಿಕೆಗಳಿಗೆ ಅಂಕಣಗಳನ್ನು ಬರೆಯುವ ಹವ್ಯಾಸವನ್ನಿಟ್ಟುಕೊಂಡಿರುವ, ಕನ್ನಡದ ನೆಲದಲ್ಲಿ ಹುಟ್ಟಿ ಜಗತ್ತಿನ ಮೂಲೆಮೂಲೆಗಳನ್ನು ತಿರುಗಿ ಪ್ರಸಿದ್ಧಿಯನ್ನು ಪಡೆದ ಭಾರತದ ಪ್ರಖ್ಯಾತ ಪತ್ರಕರ್ತ ಎಂ.ವಿ.ಕಾಮತ್ ಅವರು ಕನ್ನಡಮಾತೆಯ ಹೆಮ್ಮೆಯ ಕುವರ.

ಇದೇ ಸೆಪ್ಟೆಂಬರ್, ಏಳರಂದು ೯೩ನೆಯ ಜನ್ಮದಿನವನ್ನಾಚರಿಸುವ ಎಂ. ವಿ. ಕಾಮತ್ ಅವರು ಉತ್ತಮ ಆರೋಗ್ಯವನ್ನು ಹೊಂದಿ ಶತಾಯುಷಿಯಾಗಲಿ ಎನ್ನುವುದೇ ನನ್ನ ಹಾರೈಕೆ.

## ಚಿಣ್ಣರಬಿಂಬದ ಶಿಕ್ಷಕರಿಗೆ ತರಬೇತಿ ಶಿಬಿರ
## ಕನ್ನಡವೆನ್ನುವುದು ಸಂಗೀತ ಭಾಷೆ– ಸುಬ್ರಾಯ ಭಟ್

ಮುಂಬಯಿ:– ಕನ್ನಡ ಸುಂದರ ಭಾಷೆ. ಅದನ್ನು ಕಲಿಸುವಾಗ ಭಾವಾಭಿನಯದಿಂದ ಕಲಿಸಬೇಕು. ಶುದ್ಧ ಕನ್ನಡದ ಉಚ್ಚಾರ ಅತೀ ಅಗತ್ಯ. ಆಡುವ ಮಾತಿನಲ್ಲಿ ಸ್ಪಷ್ಟತೆ ಇರಬೇಕು. ಮಕ್ಕಳಿಗೆ ಕಲಿಸುವಾಗ ಸಣ್ಣ ಸಣ್ಣ ಹಾಡುಗಳ ಮುಖೇನ ಆಸಕ್ತಿ



ಹುಟ್ಟಿಸುವ ಕಾರ್ಯವನ್ನು ಶಿಕ್ಷಕರು ಮಾಡಬೇಕು. ಹಾಡು ಮತ್ತು ಭಾವಕ್ಕೆ ಪ್ರಾಮುಖ್ಯತೆ ನೀಡಬೇಕು. ಶಿಕ್ಷಕರ ಭಾವಾಭಿನಯವನ್ನು ಚಿಣ್ಣರು ಅನುಕರಿಸುತ್ತಾರೆ. ಆಗ ಸರಿಯಾದ ಉಚ್ಚಾರ ಸಾಧ್ಯವಾಗುತ್ತದೆ. ಯಾಕೆಂದರೆ ಹಾಡಿನಿಂದ ಮಾತು ಬರುತ್ತದೆ. ಕನ್ನಡ ಎನ್ನುವುದು ಸಂಗೀತ ಭಾಷೆ ಎಂದು ಅವರು ಅಭಿಪ್ರಾಯ ಪಟ್ಟರು. ಚಿಣ್ಣರ ಬಿಂಬದ ಮೂಲಕ ಕನ್ನಡದ ಕೆಲಸ ಮಾಡುತ್ತಿರುವುದು ಅದು ಹೊಸ ಮನ್ವಂತರಕ್ಕೆ ನಾಂದಿ ಹಾಡಿದಂತೆ. ಈ ಮೂಲಕ ಕನ್ನಡ ರಥವನ್ನು ಎಳೆಯುವ ಕಾಯಕವನ್ನು ಮೆಚ್ಚಲೇ ಬೇಕು. ಎಂದು ಅವರು ಚಿಣ್ಣರಬಿಂಬದ ಕಾರ್ಯವೈಖರಿಯನ್ನು ಶ್ಲಾಘಿಸಿದರು. ನಂತರ ಅವರು ಶಿಕ್ಷಕರಿಗೆ ಉಪಯೋಗವಾಗುವಂತೆ ಸುಲಭವಾಗಿ ಕನ್ನಡ ಕಲಿಸುವ ಪದ್ಧತಿಯನ್ನು ತಿಳಿಸಿದರು. ಅವರು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಹಾಗೂ ಚಿಣ್ಣರಬಿಂಬದ ಜಂಟಿ ಆಶ್ರಯದಲ್ಲಿ ಚಿಣ್ಣರಬಿಂಬದ ಶಿಕ್ಷಕರಿಗೆ ವಿಶೇಷ ತರಬೇತಿ ಶಿಬಿರ, ವ್ಯಕ್ತಿತ್ವ ವಿಕಸನ ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದರು.

ಶಿಬಿರದ ನಿರ್ದೇಶಕರಾದ ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಡಾ.ಜಿ.ಎನ್.ಉಪಾಧ್ಯ ಅವರು ಚಿಣ್ಣರ ಬಿಂಬ ಒಂದು ಅಪೂರ್ವ ಸಂಸ್ಥೆ. ಮಕ್ಕಳಿಂದ ಮಕ್ಕಳಿಗಾಗಿ ನಡೆಸುವ ಸಂಸ್ಥೆ. 12 ವರ್ಷಗಳಲ್ಲಿ ಅಕಾಡೆಮಿ, ಮಿಶ್ವವಿದ್ಯಾಲಯದಂತೆ ಇಲ್ಲಿ ಕನ್ನಡದ ಕಾರ್ಯ ನಡೆಯುತ್ತಿದೆ. ಇದೊಂದು ಬಾಲವಿಕಾಸ ಅಕಾಡೆಮಿ ಆಗಿದೆ. ಚಿಣ್ಣರಬಿಂಬದ ಮೂಲಕ ನಾಡನ್ನು ಕಟ್ಟುವ ಕಾರ್ಯ ಆಗುತ್ತಿದೆ. ಹೊಸತಲೆಮಾರಿಗೆ– ಸಂಸ್ಕೃತಿ, ಪರಂಪರೆ ದಾಟಿಸುವ ಕಾರ್ಯ, ವ್ಯಕ್ತಿವ ವಿಕಸನ, ಪ್ರತಿಭಾನ್ವೇಷಣೆ ನಿರಂತರವಾಗಿ ಈ ಸಂಸ್ಥೆಯ ಮೂಲಕ ನಡೆಯುತ್ತಿದ್ದು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಇದು ಬಹಳ ಸಹಕಾರಿಯಾಗಿದೆ. ಚಿಣ್ಣರಬಿಂಬ ಎಂಬ ಸಂಸ್ಥೆಯ ಮುಖೇನ ನಮ್ಮ ಮಕ್ಕಳು ಬೆಳೆಯುತ್ತಿರುವ ರೀತಿ ಇತರರಿಗೆ ಅನುಕರಣೀಯವಾದುದು. ಇದೊಂದು ಗೆಳೆಯರ ಬಳಗವಿದ್ದಂತೆ. ಇಲ್ಲಿನ ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರದ ಜೊತೆಯಲ್ಲಿ ಆತ್ಮವಿಶ್ವಾಸ ಮೂಡುತ್ತದೆ. ಅದು ಅವರ ಭವ್ಯ ಭವಿಷ್ಯಕ್ಕೆ ಉತ್ತಮ ತಳಹದಿಯನ್ನು ಹಾಕಿಕೊಡುವಲ್ಲಿ ಯಶಸ್ವಾಗಿದೆ. ಚಿಣ್ಣರಬಿಂಬ ಎನ್ನುವುದು ಕಲ್ಪವೃಕ್ಷ ನೆಟ್ಟಂತೆ. ಪ್ರಕಾಶ್ ಭಂಡಾರಿ ಅವರು ಕುಲಪತಿಯಂತೆ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ವೃತ್ತಿಯಲ್ಲಿ ಹಿರಿಯ ಪೋಲೀಸ್ ಅಧಿಕಾರಿಯಾಗಿದ್ದರೂ ಕನ್ನಡ ಕ್ರಾಂತಿಯನ್ನು ಮಾಡುತ್ತಿರುವವರು. ಸಾವಿರಾರು ಮಕ್ಕಳ ಬಾಳ್ವೆಗೆ ಬೆಳಕಾದವರು ಎಂದು ಅಭಿಪ್ರಾಯಪಟ್ಟರು. ಅವರು ಶಿಕ್ಷಕರನ್ನು ಉದ್ದೇಶಿಸಿ ತರಗತಿಯಲ್ಲಿ ಕೇವಲ ಅಕ್ಷರ ಕಲಿಕೆ ಅಥವಾ ವ್ಯಾಕರಣಕ್ಕೆ ಮಾತ್ರ ಪ್ರಾಮುಖ್ಯತೆಯನ್ನು ನೀಡದೆ ಮಾತುಕತೆಗೆ ಹೆಚ್ಚು ಒತ್ತುಕೊಡಬೇಕು. ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ. ಇಲ್ಲಿ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ಕಾರ್ಯ ನಡೆಯುತ್ತಿರುವುದು ಶ್ಲಾಘನೀಯ. ಆದ್ದರಿಂದ ಶಿಕ್ಷಕರು ಕನ್ನಡ ಕಲಿಕಾ ತರಗತಿಗಳಲ್ಲಿ ಮಕ್ಕಳ ಮನಸನ್ನು ಅರಳಿಸುವ ಕಾರ್ಯ ಮಾಡಬೇಕು ಎಂದು ಕನ್ನಡ ಕಲಿಕೆಯ ಪ್ರಯೋಜನಗಳನ್ನು ತಿಳಿಸಿದರು. ಸಂಗೀತ ವಿದುಷಿ ಶ್ಯಾಮಲಾ ಪ್ರಕಾಶ್ ಅವರು ಕನ್ನಡ ಕಲಿಸಲು ತಾನು ಅನುಸರಿಸುವ ವಿಧಾನವನ್ನು ತಿಳಿಸಿದರು. ಸಾಮೂಹಿಕ ಪ್ರಾರ್ಥನೆಯ ಮೂಲಕ ಮಕ್ಕಳ ಮನಸ್ಸಿನಲ್ಲಿ ಏಕಾಗ್ರತೆಯನ್ನು ಉಂಟುಮಾಡಬಹುದು. ಚಿಣ್ಣರಬಿಂಬದ ಮೂಲಕ ಕನ್ನಡ ದುಂದುಭಿ ಮೊಳಗುತ್ತಿದೆ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಚಿಣ್ಣರ

*(ಪುಟ 14ಕ್ಕೆ)*

# ಮುಂಬಯಿ ವಿ.ವಿ. ಕನ್ನಡ ವಿಭಾಗದಲ್ಲಿ ವಿಚಾರ ಸಂಕಿರಣ : ವಿಭಾಗದ 50ನೇ ಕೃತಿ ಬಿಡುಗಡೆ, ಕ.ಸಾ.ಪರಿಷತ್ತಿನ ನೂರರ ಸಂಭ್ರಮ

ಅಂದು ಕ್ಷೀರಸಾಗರದ ಮಥನ ನಡೆದಾಗ ಮೊದಲು ಬಂದದ್ದು ವಿಷ. ಅನಂತರ ಅಮೃತ ಬಂದಿದ್ದು. ವಿಷವನ್ನು ಶಿವ ನುಂಗಿದ, ನೀಲಕಂಠನಾದ. ಕೆಟ್ಟದ್ದನ್ನು ಒಳಗಿಟ್ಟು, ಒಳ್ಳೆಯದನ್ನು ಸಮಾಜಕ್ಕೆ ಹಂಚಬೇಕು. ಇಂದು ಆಗಬೇಕಾಗಿರುವುದು ಜ್ಞಾನ ಸಾಗರದ ಮಥನ. ಮಾಧ್ಯಮಗಳೂ ಒಳ್ಳೆಯದನ್ನೇ ತೋರಿಸಿಕೊಡುವ ಕೆಲಸವನ್ನು ಮಾಡಬೇಕಾಗಿದೆ ಎಂದು ಹೆಸರಾಂತ ಸಾಹಿತಿ, ಖ್ಯಾತ ವಾಗ್ಮಿ ಅಂಬಾತನಯ ಮುದ್ರಾಡಿ ಹೇಳಿದರು.

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗ ಮತ್ತು ಕ.ಸಾ.ಪ. ಮಹಾರಾಷ್ಟ್ರ ಘಟಕದ ಸಂಯುಕ್ತ ಆಶ್ರಯದಲ್ಲಿ ಸಾಹಿತ್ಯ ಅಕಾಡೆಮಿ ದೆಹಲಿಯ ಪ್ರಾಯೋಜಕತ್ವದಲ್ಲಿ ವಿಚಾರ ಸಂಕಿರಣ, ಕೃತಿ ಬಿಡುಗಡೆ, ಕನ್ನಡ ಸಾಹಿತ್ಯ ಪರಿಷತ್ತು ನೂರರ ಸಂಭ್ರಮ ಕಾರ್ಯಕ್ರಮವನ್ನು ಮುಂಬಯಿ ವಿಶ್ವವಿದ್ಯಾಲಯ ಕಲೀನಾ ಕ್ಯಾಂಪಸ್‌ನ ಡಬ್ಲ್ಯ್ಯು.ಆರ್.ಐ.ಸಿ. ಭವನದಲ್ಲಿ ಅವರು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು.



ಜ್ಞಾನ ಸಾಗರದ ಮಥನ ಆದಾಗ ಕೆಟ್ಟದ್ದು ಮತ್ತು ಒಳ್ಳೆಯದು ಎರಡೂ ರೀತಿಯ ಸಾಹಿತ್ಯ ಬರುತ್ತದೆ. ಆದರೆ, ನೀಲಕಂಠನಂತೆ ಸಾಹಿತಿಗಳು ಕೆಟ್ಟದ್ದನ್ನು ಒಳಗಿಟ್ಟು ಒಳ್ಳೆಯ ಸಾಹಿತ್ಯ ಸಮಾಜಕ್ಕೆ ನೀಡುವಂತಾಗಬೇಕು. ಅಮೃತವನ್ನು ಉತ್ತಮರಿಗೆ ಹಂಚುವ ಮೋಹಿನಿಯಂತೆ ಸಾಹಿತ್ಯ ಮೋಹಿನಿಯಾಗಿ ಎಲ್ಲರನ್ನೂ ಆಕರ್ಷಿಸಲಿ ಎಂದು ಹಾರೈಸಿದರು.

ಆರಂಭದಲ್ಲಿ ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ಕುರಿತು ಬ್ರಹ್ಮಾವರದ ಚಂದ್ರಶೇಖರ ಕೆದ್ಲಾಯ ಅವರಿಂದ ಗಮಕ ವಾಚನ, ಅಂಬಾತನಯ ಮುದ್ರಾಡಿ ಅವರಿಂದ ವ್ಯಾಖ್ಯಾನ ನಡೆಯಿತು.

**ವಿಚಾರ ಸಂಕಿರಣ**

ಇದೇ ವೇದಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನೂರರ ಸಂಭ್ರಮವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ 'ಸಾಹಿತ್ಯ ಪರಿಷತ್ತಿನ ಏಳುಬೀಳುಗಳು' ಕುರಿತಂತೆ ಉಪನ್ಯಾಸಕಿ ಡಾ. ಮನೋನ್ಮನಿ ಬೆಂಗಳೂರು, ಸಾಹಿತಿ, ಪತ್ರಕರ್ತ ಸ್ನೇಹ ಸಂಬಂಧದ ಸಂಪಾದಕ ಶ್ರೀನಿವಾಸ ಜೋಕಟ್ಟೆ ಮುಂಬಯಿ ಮತ್ತು ಸಾಹಿತಿ ಡಾ. ಜೀವಿ ಕುಲಕರ್ಣಿ ಮುಂಬಯಿ ಅವರು ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಕನ್ನಡ ನಾಡಿನ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಹೆಗ್ಗುರುತಾಗಿ 1915ರ ಮೇ 5 ರಂದು ಜನ್ಮ ತಳೆದ ಕನ್ನಡ ಸಾಹಿತ್ಯ ಪರಿಷತ್ ನೂರನೇ ವರ್ಷಕ್ಕೆ ಕಾಲಿರಿಸಿದೆ. ಕಳೆದ 99 ವರ್ಷಗಳಲ್ಲಿ ಪರಿಷತ್ 24 ಅಧ್ಯಕ್ಷರನ್ನು ಕಂಡಿದೆ. ನಾಲ್ವಡಿ ಕೃಷ್ಣರಾಜ್ ಒಡೆಯರ್ ಅವರಿಂದ ಸ್ಥಾಪಿಸಲ್ಪಟ್ಟಿರುವ ಕನ್ನಡ ಸಾಹಿತ್ಯ ಪರಿಷತ್ ಏಳುಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ. ಆದರೆ, ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುವುದು ಸಾಕಾಗುತ್ತಿಲ್ಲ. ಕನ್ನಡ ನಾಡು-ನುಡಿ, ಗಡಿಭಾಗದ ಕನ್ನಡಿಗರ ಸಮಸ್ಯೆಗಳಿಗೆ ಇನ್ನಷ್ಟು ಸಶಕ್ತವಾಗಿ ಸ್ಪಂದಿಸುವಂತಾಗಲಿ. ಶೈಕ್ಷಣಿಕ ವ್ಯವಸ್ಥೆ ಕುರಿತಂತೆ ಪರಿಷತ್ ಗಮನ ಹರಿಸಬೇಕಾಗಿದೆ ಎಂದು ವೇದಿಕೆಯ ಉಪನ್ಯಾಸ ನೀಡಿದವರು ಪ್ರತಿಕ್ರಿಯಿಸಿದರು.

**ಕೃತಿಗಳ ಬಿಡುಗಡೆ**

ಇದೇ ವೇದಿಕೆಯಲ್ಲಿ 'ವಚನ ಸಾಹಿತ್ಯದ ಓದಿನ ವಿಭಿನ್ನ ನೆಲೆಗಳು' (ಡಾ. ಮನೋನ್ಮನಿ), 'ಬೇಂದ್ರೆ, ಕೆ.ಎಸ್.ನ ಜೀವಿ ಕಾವ್ಯ' (ಸುರೇಖಾ ನಾಯ್ಕ್), ಬೆಂಗಳೂರಿನಲ್ಲಿ ಕನ್ನಡ ಭಾಷೆಗಿರುವ ಆತಂಕಗಳು (ರಾಜೇಶ್ವರಿ ಎಂ.ಆರ್.) ಈ ಮೂರು ಕೃತಿಗಳನ್ನು ವೇದಿಕೆಯಲ್ಲಿ ಡಾ. ಜೀವಿ ಕುಲಕರ್ಣಿ, ಚಂದ್ರಶೇಖರ ಕೆದ್ಲಾಯ, ಅಂಬಾತನಯ ಮುದ್ರಾಡಿ ಬಿಡುಗಡೆಗೊಳಿಸಿದರು.

ಕೃತಿಗಳನ್ನು ಡಾ. ಜಿ.ಎನ್. ಉಪಾಧ್ಯ, ಪೂರ್ಣಿಮಾ ಎಸ್. ಶೆಟ್ಟಿ, ಡಾ. ಮನೋನ್ಮನಿ ಪರಿಚಯಿಸಿದರು.

ಕೃತಿಕಾರರಾದ ಡಾ. ಮನೋನ್ಮನಿ, ರಾಜೇಶ್ವರಿ ಎಂ. ಆರ್, ಸುರೇಖಾ ನಾಯ್ಕ್ ತಮ್ಮ ಅನಿಸಿಕೆಗಳನ್ನು ತೆರೆದಿಟ್ಟರು.

ಮುಂಬಯಿ ವಿ.ವಿ. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎನ್. ಉಪಾಧ್ಯ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕನ್ನಡ ವಿಭಾಗ ಪ್ರಕಟಣಾ ಕ್ಷೇತ್ರದಲ್ಲಿ 50 ನೆಯ ಕೃತಿಯನ್ನು ಬಿಡುಗಡೆಗೊಳಿಸಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅವರು ವಿಭಾಗದ ಸಾಧನೆಗಳನ್ನು ತೆರೆದಿಟ್ಟರು.

ಕ.ಸಾ.ಪ. ಮಹಾರಾಷ್ಟ್ರ ಘಟಕದ ಅಧ್ಯಕ್ಷರಾದ ಎಚ್.ಬಿ.ಎಲ್. ರಾವ್ ಈ ಸಂದರ್ಭದಲ್ಲಿ ಪರಿಷತ್‌ನ ಮಹಾರಾಷ್ಟ್ರ ಘಟಕದ ವಿಂಶತಿ ಸಂಭ್ರಮದ ಕಾರ್ಯಕ್ರಮಗಳನ್ನು ತಿಳಿಸಿದರು. ಹಾಗೂ ಪ್ರಥಮ ಮಹಿಳಾ ಸಾಹಿತ್ಯ ಸಮಾವೇಶವನ್ನು ಆ. 30 ಮತ್ತು 31ರಂದು ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ಹಮ್ಮಿಕೊಂಡಿರುವುದನ್ನೂ ಹೇಳಿದರು.

ಡಾ. ಜ್ಯೋತಿ ಸತೀಶ್ ಮತ್ತು ಪೂರ್ಣಿಮಾ ಎಸ್. ಶೆಟ್ಟಿ ಕಾರ್ಯಕ್ರಮಗಳನ್ನು ನಿರೂಪಿಸಿದರು.

ಪತ್ರಕರ್ತ ದಿನೇಶ್ ಶೆಟ್ಟಿ ರೆಂಜಾಳ ಅವರು ಇತ್ತೀಚೆಗೆ ನಿಧನರಾದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಯು.ಆರ್. ಅನಂತಮೂರ್ತಿ ಅವರ ಕಿರು ಪರಿಚಯ ನೀಡಿದರು. ಹಾಗೂ ಮೌನ ಪ್ರಾರ್ಥನೆಯ ಮೂಲಕ ಅನಂತಮೂರ್ತಿಯವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಕನ್ನಡ ವಿಭಾಗದ ನಿರಂಜನ ಸಿ.ಎಸ್, ಶಿವರಾಜ್ ಎಂ.ಜಿ. ಸಂಚಾಲಕತ್ವ ವಹಿಸಿದ್ದರು.

# ಮಾನಸಿಕ ಆರೋಗ್ಯ ಕಾಪಾಡಿ

ಚಂಚಲವಾಗಿರುವುದು ಮನಸ್ಸಿನ ಹುಟ್ಟುಗುಣ. ಪರಿಸರದಲ್ಲಿರುವ ಹತ್ತು-ಹಲವು ಸಂಗತಿಗಳನ್ನು ಅದು ಗಮನಿಸುತ್ತಿರುತ್ತದೆ, ಪ್ರತಿಕ್ರಿಯಿಸುತ್ತಿರುತ್ತದೆ. ಪರಿಸರದ ಅನೇಕ ಪ್ರಚೋದನೆಗಳು ಮನಸ್ಸಿಗೆ ಹಿತವಾಗಿರುವುದಿಲ್ಲ. ಆಗ ಅದು ದುಃಖ, ಕೋಪ, ಭಯವನ್ನು ಪ್ರಕಟಿಸುತ್ತಿದೆ. ಯಾವುದಾದರೊಂದು ಉಪಯುಕ್ತ ವಿಚಾರ ಮತ್ತು ಕೆಲಸದಲ್ಲಿ ನಾವು ಮಗ್ನರಾಗಿರಬೇಕು. ಕೆಲಸ ಕಾರ್ಯಗಳನ್ನು ಸಕಾಲದಲ್ಲಿ ನಾವು ಮಗ್ನರಾಗಿರಬೇಕು. ಕೆಲಸ ಕಾರ್ಯಗಳನ್ನು ಸಕಾಲದಲ್ಲಿ ಪೂರೈಸುವ ತಾಳ್ಮೆ, ಕೌಶಲ್ಯ ನಮಗಿರಬೇಕು. ಆದರೆ, ಅದನ್ನು ಮಾಡಲು ಮನಸ್ಸಿಲ್ಲದಿರಬಹುದು. ಕಷ್ಟ ನಷ್ಟಗಳು ಎದುರಾಗುವುದು ಸಹಜ. ಅವು ಬಂದಾಗ ನಮ್ಮ ಮನಸ್ಸು ತಳಮಳಕ್ಕೆ ಒಳಗಾಗುತ್ತದೆ. ಧೈರ್ಯ ಕಳೆದುಕೊಳ್ಳುತ್ತದೆ. ನಮ್ಮ ಎಷ್ಟೋ ಬೇಕು ಬೇಡಗಳನ್ನು ನಾವು ಗಮನಿಸಲಾಗುವುದಿಲ್ಲ. ಆಗ ಮನಸ್ಸು ಪ್ರತಿಭಟಿಸುತ್ತದೆ. ನಮ್ಮ ಸಂಪನ್ಮೂಲಗಳು ಸೀಮಿತವಾಗಿದ್ದಾಗ ನಾವು ಅದಕ್ಕೆ ಹೊಂದಿಕೊಳ್ಳಬೇಕಾಗುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಮನಃಶಾಸ್ತ್ರಜ್ಞ ಸಿಗ್ಮಂಡ್ ಫ್ರಾಯ್ಡ್ ಹೇಳಿದ್ದಾನೆ. ಮನಸ್ಸಿನಲ್ಲಿ ಮೂರು ಭಾಗಗಳಿವೆ. ಆಸೆಗಳನ್ನು ಪೂರೈಸಿಕೊಳ್ಳುವುದರಲ್ಲೇ ಸದಾ ಮಗ್ನವಾಗಿರುವ ಭಾಗವೇ 'ಇದ್' ಹೇಗೋ ಬಯಕೆಗಳನ್ನು ಪೂರೈಸಿಕೊಂಡು ಸುಖಿಸುವುದೇ ಇದರ ಪರಮಗುರಿ. ಹೀಗಾಗಿ ಇದು ವಾಸ್ತವಿಕತೆಯನ್ನಾಗಲಿ, ಕಾರ್ಯ ಕಾರಣಗಳನ್ನಾಗಲೀ ಸರಿ-ತಪ್ಪುಗಳನ್ನಾಗಲಿ ಗುರುತಿಸುವುದಿಲ್ಲ. ಆದರೆ, ಮನಸ್ಸಿನ ಇನ್ನೊಂದು ಭಾಗ 'ಈಗೋ' ವಾಸ್ತವಿಕತೆಯನ್ನು ಅರ್ಥಮಾಡಿಕೊಳ್ಳುತ್ತದೆ. ವಾಸ್ತವಿಕತೆಯ ಇತಿಮಿತಿಯಲ್ಲಿ 'ಇದ್'ನ ಬೇಡಿಕೆಗಳನ್ನು ಮುಂದೂಡಲು ಅಥವಾ ಬೇಡ ಎನ್ನಲು ಪ್ರಯತ್ನಿಸುತ್ತದೆ. ಮನಸ್ಸಿನ ಮತ್ತೊಂದು ಭಾಗ 'ಸುಪರ್ ಈಗೋ' ನಡುವೆ ಒಂದಲ್ಲ ಒಂದು ವಿಷಯಕ್ಕಾಗಿ ಘರ್ಷಣೆ, ತಾಕಲಾಟ ನಡೆದಿರುತ್ತದೆ. ಮಾನಸಿಕ ಆರೋಗ್ಯವೆಂದರೆ ಈಗೋ ಬಲವಾಗಿರುವುದು. ಆಗ ಅದು ಇದ್ ಮತ್ತು ಸುಪರ್ ಈಗೋವನ್ನು ನಿಭಾಯಿಸುತ್ತಾ ವ್ಯಕ್ತಿಯ ಅಗತ್ಯಗಳನ್ನು ಪೂರೈಸಲು ನೆರವಾಗುತ್ತಾ ಆತ ಇತರರೊಡನೆ ಹೊಂದಿಕೊಂಡು ಬಾಳಲು ಈಗೋ ಯಶಸ್ವಿಯಾಗಿ ನೆರವಾಗುತ್ತದೆ. ಅಂದರೆ, ಮಾನಸಿಕವಾಗಿ ಆರೋಗ್ಯವಾಗಿರುವ ವ್ಯಕ್ತಿಯ ಲಕ್ಷಣಗಳು ಈ ಕೆಳಗಿನಂತಿರುತ್ತವೆ.

ವಾಸ್ತವಿಕ ಪ್ರಜ್ಞೆ ಚೆನ್ನಾಗಿರುತ್ತದೆ. ಭ್ರಮೆಗೆ, ಹಗಲುಗನಸುಗಳಿಗೆ ಎಡೆ ಇರುವುದಿಲ್ಲ.

ಆತ ತನ್ನ ಬೇಕು ಬೇಡಗಳನ್ನು ಸಾಮಾಜಿಕ ಮತ್ತು ನೈತಿಕ ನಿಯಮಗಳ ಚೌಕಟ್ಟಿನೊಳಗೇ ಪೂರೈಸಿಕೊಳ್ಳಲು ಪ್ರಯತ್ನಿಸುತ್ತಾನೆ.

ಆತ ಸ್ನೇಹಮಯಿ, ದಯಾಮಯಿ ಹಾಗೂ ಯಾರಿಗೂ ತೊಂದರೆ, ಕೆಡುಕು ಮಾಡದೇ ಎಲ್ಲರೊಡನೆ ಹೊಂದಿಕೊಂಡು ಬಾಳಲು ಪ್ರಯತ್ನಿಸುತ್ತಾನೆ.

ಸ್ವಾರ್ಥಕ್ಕೆ ಪ್ರಾಮುಖ್ಯತೆ ಕೊಡದೆ, ಇತರರ ಬೇಕು ಬೇಡಗಳನ್ನು ಗಮನಿಸುತ್ತಾನೆ. ಸಮಾಜದ ಏಳಿಗೆಗೆ ದುಡಿಯುತ್ತಾನೆ.

ಕ,ಟ ಸಮಸ್ಯೆಗಳು ಎದುರಾದಾಗ ಧೈರ್ಯದಿಂದ ಎದುರಿಸುತ್ತಾನೆ. ಪರಿಹಾರೋಪಾಯಗಳನ್ನು ಯೋಚಿಸಿ ಕಾರ್ಯಗತ ಮಾಡುತ್ತಾನೆ.

ಸಮಯ ಸಂದರ್ಭಕ್ಕೆ ತಕ್ಕ ನಡೆ, ನುಡಿ, ಭಾವನೆಗಳನ್ನು ಪ್ರಕಟಿಸುತ್ತಾನೆ. ಭಾವೋದ್ರೇಕಕ್ಕೆ ಒಳಗಾಗುವುದಿಲ್ಲ. ಸಮಚಿತ್ತನಾಗಿರುತ್ತಾನೆ.

ಪರ್ವಾಗ್ರಹ ಪೀಡಿತನಾಗದೆ ಮುಕ್ತ ಮನಸ್ಸಿನವನಾಗಿರುತ್ತಾನೆ. ತನ್ನ ತಿಳುವಳಿಕೆ ಜ್ಞಾನ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಲು ಸದಾ ಪ್ರಯತ್ನಿಸುತ್ತಾನೆ.

ಸೃಜನಶೀಲ ಚಟುವಟಿಕೆಗಳಲ್ಲಿ ಆಸಕ್ತಿ ತೋರಿಸುತ್ತಾನೆ.

ಆರೋಗ್ಯಕರ ಜೀವನ ಶೈಲಿಯನ್ನು ರೂಪಿಸಿಕೊಳ್ಳುತ್ತಾನೆ. ಆಹಾರ ಸೇವನೆ, ನಿದ್ರೆ, ಮೈಥುನ, ಸ್ವಚ್ಛತೆ, ವ್ಯಾಯಾಮ, ಮನರಂಜನೆ ವಿಷಯಗಳಲ್ಲಿ ಶಿಸ್ತನ್ನು ಕಾಪಾಡಿಕೊಳ್ಳುತ್ತಾನೆ. ಅನಾರೋಗ್ಯದ ಲಕ್ಷಣಗಳನ್ನು ಗಮನಿಸಿ ತಕ್ಷಣ ಅವನ್ನು ನಿವಾರಿಸಲು ಕ್ರಮ ಕೈಗೊಳ್ಳುತ್ತಾನೆ. ತನ್ನ ಮತ್ತು ತನ್ನವರ ಆರೋಗ್ಯಕ್ಕೆ ಆದ್ಯತೆ ನೀಡುತ್ತಾನೆ.



✍ ಶಾರದಾ ಎ. ಅಂಚನ್

ಉದ್ಯೋಗಶೀಲನಾಗಿ ತನ್ನ ಕೆಲಸವೃತ್ತಿಯನ್ನು ಪ್ರೀತಿಸುತ್ತಾನೆ. ತನ್ಮೂಲಕ ಇತರರಿಗೆ ನೆರವಾಗುತ್ತಾನೆ.

ಸರ್ವಾಧಿಕಾರಿಯಂತೆ ವರ್ತಿಸದೆ ಇತರರ ಅನಿಸಿಕೆ, ಅಭಿಪ್ರಾಯಗಳಿಗೆ ಬೆಲೆ ಕೊಡುತ್ತಾನೆ. ಬಹುಜನರ ಅಭಿಪ್ರಾಯಕ್ಕೆ ಮನ್ನಣೆ ನೀಡುತ್ತಾನೆ.

ನೈತಿಕ ಮೌಲ್ಯಗಳನ್ನು ಪಾಲಿಸುವುದರಲ್ಲಿ ಸಂತೋಷವನ್ನು, ಹೆಮ್ಮೆಯನ್ನು ಕಾಣುತ್ತಾನೆ.

ಈ ರೀತಿಯ ಮಾನಸಿಕ ಆರೋಗ್ಯ ಸಮತೋಲನಕ್ಕಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು. ಮಾನಸಿಕ ಆರೋಗ್ಯದಿಂದ ದೇಹದ ಆರೋಗ್ಯವೃದ್ಧಿಯಾಗುತ್ತದೆ. ನಮ್ಮ ದೈಹಿಕ- ಮಾನಸಿಕ ಸಾಮರ್ಥ್ಯಗಳು ಹೆಚ್ಚುತ್ತವೆ. ಇದರಿಂದ ನಮ್ಮೆಲ್ಲರ ಪ್ರಗತಿ ಸಾಧ್ಯ. ಈ ಮೂಲಕ ಸಮೃದ್ಧಿ, ಸಂತೃಪ್ತಿಯ ಬದುಕು ನಮ್ಮದಾಗುವುದರಲ್ಲಿ ಸಂಶಯವಿಲ್ಲ.

# ಕನ್ನಡ ಕಲಿಕಾ ವರ್ಗಗಳ ಶಿಕ್ಷಕಿ ಶ್ರೀಮತಿ ಲಕ್ಷ್ಮೀ ಸುಧೀಂದ್ರ ಅವರಿಗೆ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಗೌರವಾರ್ಪಣೆ



ಕಳೆದ 25 ವರ್ಷಗಳಿಂದ ಮಾಟುಂಗಾ ಪಶ್ಚಿಮದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಕರ್ನಾಟಕ ಸಂಘ ಮತ್ತು ಮಾಟುಂಗಾ ಪೂರ್ವದ ಮುಂಬಯಿ ಕನ್ನಡ ಸಂಘ-ಗಗಳಲ್ಲಿ ಕನ್ನಡೇತರರಿಗೆ ಕನ್ನಡವನ್ನು ಕಲಿಸುತ್ತಿರುವ ಕನ್ನಡ ಕಲಿಕಾ ವರ್ಗಗಳ ವಿದ್ಯಾರ್ಥಿಪ್ರಿಯ ಶಿಕ್ಷಕಿ ಶ್ರೀಮತಿ ಲಕ್ಷ್ಮೀ ಸುಧೀಂದ್ರ ಅವರನ್ನು ಅವರ ಕನ್ನಡ ಕಟ್ಟುವ ಸಮರ್ಪಣಾಭಾವದ ನಿರಂತರ ಸೇವೆಯನ್ನು ಗುರುತಿಸಿ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಪರವಾಗಿ ಶನಿವಾರ ಆಗಸ್ಟ್ 16 ರಂದು ಚಿಣ್ಣರ ಬಿಂಬದ ಕನ್ನಡ ಕಲಿಕಾ ವರ್ಗಗಳ ಶಿಕ್ಷಕ ಶಿಕ್ಷಕಿಯರ ಮಾರ್ಗದರ್ಶನ ಶಿಬಿರದಲ್ಲಿ ಚಿಣ್ಣರ ಬಿಂಬದ ರೂವಾರಿ ಹಿರಿಯ ಪೊಲೀಸ್ ಅಧಿಕಾರಿ ಶ್ರೀ ಪ್ರಕಾಶ್ ಭಂಡಾರಿಯವರ ಹಸ್ತದಿಂದ ವಿಭಾಗದ ಮುಖ್ಯಸ್ಥ ಡಾ. ಜಿ.ಎನ್. ಉಪಾಧ್ಯ, ಖ್ಯಾತ ರಂಗಕರ್ಮಿ ಶ್ರೀ ಸುಬ್ರಾಯ ಭಟ್, ಪ್ರಾಧ್ಯಾಪಕಿ ಪೂರ್ಣಿಮಾ ಶೆಟ್ಟಿ ಹಾಗೂ ಇನ್ನಿತರ ಗಣ್ಯರ ಸಮ್ಮುಖದಲ್ಲಿ ಶಾಲು, ವಿಶ್ವವಿದ್ಯಾಲಯದ ಚಿನ್ನದ ಪದಕ ಮತ್ತು ಪುಸ್ತಕ ಗೌರವದೊಂದಿಗೆ ಸನ್ಮಾನಿಸಲಾಯಿತು. ಶ್ರೀಮತಿ ಲಕ್ಷ್ಮೀ ಸುಧೀಂದ್ರ ಅವರು ತಮಗೆ ಸಂದ ಗೌರವಾರ್ಪಣೆಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಲಕ್ಷ್ಮೀ ಸುಧೀಂದ್ರ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕವು ತನ್ನ 3ನೆಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮಾವೇಶದಲ್ಲಿ ಆಗಸ್ಟ್ 1,2010 ರಂದು ಸನ್ಮಾನಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

## ಚಿಣ್ಣರಬಿಂಬ...

ಬಿಂಬದ ರೂವಾರಿಗಳಾದ ಶ್ರೀ ಪ್ರಕಾಶ್ ಭಂಡಾರಿ ಅವರು ಚಿಣ್ಣರ ಬಿಂಬದ ಮೂಲಕ ಅನೇಕಾನೇಕ ಮಕ್ಕಳ ಭವಿಷ್ಯ ಉತ್ತಮವಾಗಿ ರೂಪುಗೊಳ್ಳುತ್ತಿದೆ. ಇದು ಚಿಣ್ಣರ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುತಿದೆ. ಸಂಸ್ಕೃತಿ–ಸಂಸ್ಕಾರಗಳನ್ನು ತಿಳಿ ಹೇಳುವುದರ ಮೂಲಕ ಮಕ್ಕಳಲ್ಲಿ ಒಳ್ಳೆಯ ವ್ಯಕ್ತಿತ್ವ ರೂಪಿಸಲು ಪ್ರಯತ್ನಿಸುತ್ತಿದ್ದೇವೆ. ನಮ್ಮಲ್ಲಿ ಕನ್ನಡ ಕಲಿತ ಮಕ್ಕಳು ವಿವಿಧ ರಂಗದಲ್ಲಿ ಪ್ರತಿಭೆಯನ್ನು ಮೆರೆದಿದ್ದಾರೆ.ಇಲ್ಲಿ ಕನ್ನಡವನ್ನು ಕಲಿತ ಮಕ್ಕಳು ಕರ್ನಾಟಕದಲ್ಲಿ ಸಿ.ಇ.ಟಿ(ಮೆಡಿಕಲ್/ಇಂಜಿನಿಯರಿಂಗ್) ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆದು ಉತ್ತಮ ಅಂಕಗಳನ್ನು ಪಡೆದಿರುವುದು ಅತ್ಯಂತ ಸಂತೋಷದ ವಿಷಯ. ಮಕ್ಕಳಲ್ಲಿ ನಾಯಕತ್ವ, ಆತ್ಮವಿಶ್ವಾಸವನ್ನು ಬೆಳೆಸಿದೆ. ಇಲ್ಲಿನ ಶಿಕ್ಷಕರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ದುಡಿಯುವವರು. ಪಾಲಕರು ಸ್ವಯಂಸೇವಕರಾಗಿ ಅಷ್ಟೇ ಮುತುವರ್ಜಿಯಿಂದ ತಮ್ಮ ನಿಸ್ವಾರ್ಥ ಸೇವೆಯನ್ನು ಮಾಡುತ್ತಿರುವುದು ಮೆಚ್ಚತಕ್ಕ ವಿಷಯ ಎಂದು ಚಿಣ್ಣರ ಬಿಂಬದ ರೂವಾರಿ, ಹಿರಿಯ ಪೋಲಿಸ್ ಅಧಿಕಾರಿ ಪ್ರಕಾಶ್ ಭಂಡಾರಿ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ನಂತರ ಸಭೆಯಲ್ಲಿ ಚಿಣ್ಣರಬಿಂಬದ ಮಕ್ಕಳ ಪ್ರತಿಭಾ ಸ್ಪರ್ಧೆ ಹಾಗೂ ವಾರ್ಷಿಕೋತ್ಸವದ ಕುರಿತು ಚರ್ಚೆ ನಡೆಸಲಾಯಿತು. ಪೂರ್ಣಿಮಾ.ಎಸ್.ಶೆಟ್ಟಿ ಅವರು ಮಾತನಾಡುತ್ತಾ ಶಿಸ್ತುಬದ್ಧ ಕಲಿಕೆಯಿದ್ದಾಲೇ ಚಿಣ್ಣರು ಕನ್ನಡವನ್ನು ಸರಿಯಾದ ರೀತಿಯಲ್ಲಿ ಕಲಿಯಲು ಸಾಧ್ಯವಾಗುತ್ತದೆ. ಚಿಣ್ಣರಲ್ಲಿ ಕಲಿಕೆಯ ಕುರಿತು ಆಸಕ್ತಿ ಹುಟ್ಟಿಸುವಂತಿರಬೇಕು. ಪರೀಕ್ಷೆಯ ಕುರಿತು ಅವರಲ್ಲಿ ಭಯವಿರಬಾರದು. ಅವರು ಕಲಿಯುತ್ತಿರುವ ಹೊಸ ಭಾಷೆಯ ಮೇಲೆ ಅವರಿಗೆ ಪ್ರೀತಿ ಹುಟ್ಟುವಂತಿರಬೇಕು ಎಂದು ಶಿಕ್ಷಕರಿಗೆ ಕೆಲವು ಮಾಹಿತಿಗಳನ್ನು ನೀಡಿದರು. ಈ ಸಂದರ್ಭದಲ್ಲಿ ಕರ್ನಾಟಕ ಸಂಘ ಹಾಗೂ ಮುಂಬಯಿ ಕನ್ನಡ ಸಂಘದಲ್ಲಿ ಕನ್ನಡೇತರರಿಗೆ ಕನ್ನಡ ಕಲಿಸುತ್ತಿರುವ ಶ್ರೀಮತಿ ಲಕ್ಷ್ಮೀ ಸುಧೀಂದ್ರ ಅವರನ್ನು ಕನ್ನಡ ವಿಭಾಗದ ವತಿಯಿಂದ ಗೌರವಿಸಲಾಯಿತು.

ಚಿಣ್ಣರ ಬಿಂಬದ ಕೇಂದ್ರ ಸಮಿತಿಯ ಭಾಸ್ಕರ ಶೆಟ್ಟಿ, ಸಂಜೀವ ಪೂಜಾರಿ, ರವಿ ಮೆಂಡನ್, ಅಶೋಕ್ ಶೆಟ್ಟಿ, ರೇಣುಕಾ ಪ್ರಕಾಶ್ ಭಂಡಾರಿ ಮೊದಲಾದವರು ಉಪಸ್ಥಿತರಿದ್ದರು. ಚಿಣ್ಣರಬಿಂಬದ ಶಿಕ್ಷಕಿಯರಾದ ಗೀತಾ ಹೇರಳ, ರತ್ನಾ, ಶಶಿಪ್ರಭಾ, ವನಿತಾ, ಮಲ್ಲಿಕಾ ಶೆಟ್ಟಿ, ಸುಲೋಚನ ಶೆಟ್ಟಿ, ಸುರೇಖಾ, ಉಷಾ ಶೆಟ್ಟಿ, ಕುಮುದಾ ಆಳ್ವ, ರಾಜೇಶ್ವರಿ, ತನುಜಾ ಭಟ್, ಅನಿತಾ ಶೆಟ್ಟಿ, ತನುಜಾ ಮೊದಲಾದವರು ಪಾಲ್ಗೊಂಡಿದ್ದರು. ರಮೇಶ್.ಡಿ.ರೈ ಅವರು ಧನ್ಯವಾದ ಸಮರ್ಪಿಸಿದರು. ಶ್ಯಾಮಲಾ ಪ್ರಕಾಶ್ ಅವರು ಸ್ವಾಗತ ಗೀತೆ ಹಾಡಿದರು. ಪೂರ್ಣಿಮಾ.ಎಸ್.ಶೆಟ್ಟಿ ಅವರು ಕಾರ್ಯಕ್ರಮ ನಿರೂಪಿಸಿದರು. ಕನ್ನಡ ವಿಭಾಗದ ರಮಾ ಉಡುಪ, ಶೈಲಜಾ ಹೆಗಡೆ, ಸುಗಂಧಾ ಸತ್ಯಮೂರ್ತಿ, ಸುರೇಖಾ.ಬಿ. ಶಿವರಾಜ್ ಎಂ.ಜಿ, ಪರಸಪ್ಪ ಮೊದಲಾದವರು ಸಹಕರಿಸಿದರು.

## ಎರಡು ದಿನ ನಾಟಕದ ಕಮ್ಮಟ

ಮಹಾಭಾರತದ ಕಥಾ ಪ್ರಸಂಗವನ್ನು ಮಾಡಿ ತೋರಿಸಿದರು. ಪ್ರತಿಯೊಂದು ಗುಂಪಿನ ಕಥಾಪ್ರಸಂಗವಾದ ನಂತರ ಅದರ ಬಗ್ಗೆ ಚರ್ಚೆ, ವಿಮರ್ಶೆ ನಡೆಸಿ, ಕುಂದು ಕೊರತೆಗಳನ್ನು ಹೇಳಿಕೊಟ್ಟರು. ಒಟ್ಟಾಗಿ ಎಲ್ಲರಿಗೂ ಇದು ಒಂದು ಹೊಸ ಅನುಭವವಾಯಿತು. ಇದಾದ ನಂತರ 1ನೆಯ ದಿನ ಕೊಟ್ಟಿದ್ದ ಆಯ್ದ ನಾಟಕದ ಭಾಗಗಳನ್ನು ಮಾಡಿ ತೋರಿಸಲಿಕ್ಕೆ ಹೇಳಿದರು. ಪ್ರತಿಯೊಂದು ಗುಂಪು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ತಮ್ಮ ನಾಟಕದ ಭಾಗವನ್ನು ಪ್ರಸ್ತುತ ಪಡಿಸಿದರು. ಈ ರೀತ್ಯ ಕಮ್ಮಟ ಶಾಲೆ ಇನ್ನು ಹಲವು ಸಲ ಮಾಡಬೇಕು ಎಂದೂ ಹಾಗೂ ಇನ್ನೂ ಹಲವಾರು ಸದಸ್ಯರು ಅದರ ಲಾಭ ಪಡೆಯಬೇಕೆಂದು ಎಲ್ಲ ಕಲಾವಿದರು ಹೇಳಿದರು. ಅದಲ್ಲದೆ ಇದರಿಂದ ದೇಹ ಹಾಗೂ ಮನಸ್ಸು ಉಲ್ಲಾಸದಿಂದ ಇರುತ್ತದೆ ಎಂದು ಎಲ್ಲರೂ ಒಂದೇ ಕಂಠದಿಂದ ಹೇಳಿದರು.

ಇದನ್ನು ಸಂಯೋಜಿಸಿದ ಡಾ। ಬಿ.ಆರ್.ಮಂಜುನಾಥ ಅವರಿಗೆ ಎಲ್ಲರು ಹೃದಯ ಪೂರ್ವಕವಾಗಿ ಕೃತಜ್ಞತೆಯನ್ನು ಅರ್ಪಿಸಿದರು. ಈ ಎರಡು ದಿನದ ಕಮ್ಮಟ ಶಾಲೆಯ ಅಭ್ಯಾಸ ಮುಂದಿನ ನಾಟಕದಲ್ಲಿ ಪರ್ಯಾಯಗೊಳ್ಳಲಿ ಎಂದು ಅವರು ಎಲ್ಲರಿಗೂ ಆರ್ಶೀವದಿಸಿದರು. ಇದನ್ನು ಸಂಯೋಜಿಸಿದ ಮೈಸೂರು ಅಸೋಸಿಯೇಶನ್ನಿನ ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು. ಒಳ್ಳೆಯ ತಿಂಡಿ, ಊಟ ವ್ಯವಸ್ಥೆ ಮಾಡಿದ ರಾಘು ಹಾಗೂ ಇನ್ನಿತರಿಗೆ ನನ್ನ ವಂದನೆಗಳು. ಎಲ್ಲ ಸಹಕಲಾವಿದರಿಗೆ ನನ್ನ ವಂದನೆಗಳನ್ನು ತಿಳಿಸಿ, ಮುಂದಿನ ನಾಟಕದ ಬಗ್ಗೆ ವಿಚಾರ ಮಾಡುತ್ತ ಬಿಳ್ಕೊಟ್ಟೆವು.

– ಶಶಿಕಾಂತ ಜೋಶಿ

## ಜಗಜ್ಯೋತಿ ಕಲಾವೃಂದದ ಶ್ರೀಮತಿ ಸುಶೀಲಾ ಸೀತಾರಾಮ ಶೆಟ್ಟಿ ಸ್ಮಾರಕ ಕಥಾ ಪ್ರಶಸ್ತಿ ಮತ್ತು ಕವಿತಾ ಪ್ರಶಸ್ತಿ

ಮುಂಬಯಿ ಸಾಹಿತ್ಯ ಸಾಂಸ್ಕೃತಿಕ, ಸಾಂಘಿಕ ಚಟುವಟಿಕೆಗಳಲ್ಲಿ ಸದಾ ಕ್ರಿಯಾಶೀಲರಾಗಿದ್ದು ಮುಂಬಯಿಯ ಕನ್ನಡ ಸಾಹಿತ್ಯ ಲೋಕ ಬಹಳಷ್ಟನ್ನು ನಿರೀಕ್ಷಿಸುತ್ತಿದ್ದಾಗಲೇ ಇಹಯಾತ್ರೆಯನ್ನು ಮುಗಿಸಿದ ಶ್ರೀಮತಿ ಸುಶೀಲಾ ಸೀತಾರಾಮ ಶೆಟ್ಟಿಯವರ ಸ್ಮರಣಾರ್ಥ ಕಥೆ ಹಾಗೂ ಕವಿತಾ ಪ್ರಶಸ್ತಿಗಳನ್ನು 17 ವರ್ಷಗಳಿಂದ ಆಯೋಜಿಸುತ್ತಿದ್ದೇವೆ. 2014ನೇ ವರ್ಷದ ಪ್ರಶಸ್ತಿಗಾಗಿ ಕನ್ನಡದ ಸಮಸ್ತ ಮಹಿಳೆಯರಿಗಾಗಿ ಆಯೋಜಿಸಲಾಗುವ ಅಖಿಲ ಭಾರತ ಮಟ್ಟದ ಈ ಸ್ಪರ್ಧೆ ಎರಡು ವಿಭಾಗಗಳಲ್ಲೂ ಪ್ರತ್ಯೇಕವಾಗಿ ರೂಪಾಯಿ 4000/- ನಗದು ಬಹುಮಾನ, ಪ್ರಶಸ್ತಿ ಫಲಕ ಮತ್ತು ಪ್ರಶಸ್ತಿ ಪತ್ರಗಳನ್ನೊಳಗೊಂಡಿದೆ.

**ಸ್ಪರ್ಧೆಯ ನಿಯಮಗಳು**

1) ಈ ಸ್ಪರ್ಧೆ ರಾಷ್ಟ್ರದಾದ್ಯಂತದ ಸಮಸ್ತ ಕನ್ನಡದ ಮಹಿಳೆಯರಿಗಾಗಿ.
2) ಪ್ರಕಟಣೆಗೆ ಸಿದ್ಧವಾದ ಸ್ವರಚಿತ ಕಥಾ/ಕವಿತಾ ಸಂಗ್ರಹವಾಗಿರಬೇಕು.
3) ಸ್ಪರ್ಧೆಗಳಲ್ಲಿ ಭಾಗವಹಿಸುವವರು ಕಥಾ ಪ್ರಶಸ್ತಿಗೆ ಒಂದು ಕಥಾ ಸಂಕಲನ ಅಥವಾ ಕವಿತಾ ಪ್ರಶಸ್ತಿಗೆ ಒಂದು ಕವನ ಸಂಕಲನವನ್ನು ಕಳುಹಿಸಬೇಕು. ಒಬ್ಬರೇ ಎರಡೂ ಸ್ಪರ್ಧೆಗಳಲ್ಲಿ ಭಾಗವಹಿಸಬಹುದು.
4) ಕಥೆ/ಕವಿತೆಗಳನ್ನು ಹಾಳೆಯ ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಿರಬೇಕು. ಟೈಪ್ ಮಾಡಿರಬೇಕು. ಕಾರ್ಬನ್ ಪ್ರತಿ, ಝೆರಾಕ್ಸ್ ಹಾಗೂ ಪ್ರಕಟಗೊಂಡ ಹಾಳೆಯ ಪ್ರತಿಗಳನ್ನು ಸ್ವೀಕರಿಸಲಾಗುವುದಿಲ್ಲ.
5) ಕಥಾ ಪ್ರಶಸ್ತಿಗೆ ಹಸ್ತಪ್ರತಿಯು ಫುಲ್‌ಸ್ಕೇಪ್ ಹಾಳೆಯಲ್ಲಿ 100 ಪುಟಗಳಿಂದ 130 ಪುಟಗಳ ಮಿತಿಯಲ್ಲಿರಬೇಕು.
6) ಕವನ ಸಂಕಲನದಲ್ಲಿ ಕಡಿಮೆಯೆಂದರೂ 30 ಕವಿತೆಗಳಿರಬೇಕು. ಖಂಡಕಾವ್ಯ ಅಥವಾ ಚುಟುಕು/ಹನಿಗವನ/ಕವಿತೆಗಳಾಗಿರಬಾರದು.
7) ಹಸ್ತಪ್ರತಿಯಲ್ಲಿ ಹೆಸರು ನಮೂದಿಸಿರಬಾರದು. ಹೆಸರು, ವಿಳಾಸ, ಪರಿಚಯ, ದೂರವಾಣಿ ಸಂಖ್ಯೆ, ಇತ್ತೀಚಿನ ಭಾವಚಿತ್ರದೊಂದಿಗೆ ಹಸ್ತಪ್ರತಿಯ ಜೊತೆಗೆ ಪ್ರತ್ಯೇಕವಾಗಿ ಕಳುಹಿಸಬೇಕು.
8) ಪ್ರವೇಶ ಶುಲ್ಕವಿಲ್ಲ.
9) ಸ್ಪರ್ಧೆಗೆ ಬಂದ ಕೃತಿಗಳನ್ನು ಹಿಂತಿರುಗಿಸಲಾಗುವುದಿಲ್ಲ.
10) ಪ್ರಶಸ್ತಿ ಪಡೆದ ಪ್ರತಿಗಳನ್ನು ಮುದ್ರಿಸುವಾಗ ರಕ್ಷಾಪುಟದ ಮೇಲ್ಗಡೆ ಹಾಗೂ ಪ್ರಥಮ ಒಳಪುಟದಲ್ಲಿ ಜಗಜ್ಯೋತಿ ಕಲಾವೃಂದದ ಶ್ರೀಮತಿ ಸುಶೀಲಾ ಸೀತಾರಾಮ ಶೆಟ್ಟಿ ಸ್ಮಾರಕ ಕಥಾ/ಕವಿತಾ ಪ್ರಶಸ್ತಿ ವಿಜೇತ ಕೃತಿ ಎಂದು ಮುದ್ರಿಸತಕ್ಕದ್ದು.
11) ಪ್ರಶಸ್ತಿ ಪ್ರದಾನ ಸಮಾರಂಭ ವೃಂದದ ವಾರ್ಷಿಕೋತ್ಸವದಂದು ನೆರವೇರಲಿರುವುದು. ಪ್ರಶಸ್ತಿ ವಿಜೇತರನ್ನು ದೂರವಾಣಿ/ಪತ್ರದ ಮೂಲಕ ಸಂಪರ್ಕಿಸಲಾಗುವುದು.
12) ಒಮ್ಮೆ ಒಂದು ವಿಭಾಗದಲ್ಲಿ ಪ್ರಶಸ್ತಿ ಪಡೆದವರು ಅದೇ ವಿಭಾಗದ ಸ್ಪರ್ಧೆಗೆ ಮತ್ತೆ ಭಾಗವಹಿಸುವಂತಿಲ್ಲ.
13) ಸ್ಪರ್ಧೆಯ ಬಗ್ಗೆ ಯಾವುದೇ ತೀರ್ಮಾನವನ್ನು ಕೈಗೊಳ್ಳುವ ಹಕ್ಕನ್ನು ವೃಂದವು ಕಾಯ್ದಿರಿಸಿಕೊಂಡಿದೆ.
14) ಅನಾವಶ್ಯಕ ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ : ನಿರ್ಣಾಯಕರ ತೀರ್ಮಾನವೇ ಅಂತಿಮ.
15) ಕೃತಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 30/11/2014.
16) ಕೃತಿಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು (ವಿಳಾಸವನ್ನು ಇಂಗ್ಲಿಷ್‌ನಲ್ಲಿ ಸ್ಫುಟವಾಗಿ ಬರೆದಿರಬೇಕು).


SUKUMAR N. SHETTY,
C/o.S.N. Shetty Associates, Pushpa Co-op Hsg. Soc. Ltd, Ground Floor, Near Kranti Stores, M.G. Road, Dombivali (west) 421202,
Mobile : Sukumar Shetty - 9820296840
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿರಿ : Santhosh P. Shetty - 9892110826/9869824709, Vasant Suvarna - 9892833623



ಮೈಸೂರು ಅಸೋಸಿಯೇಶನ್‌ನಲ್ಲಿ ಸ್ವಾತಂತ್ರೋತ್ಸವದ ಆಚರಣೆ.



ಮುಂಬಯಿ ಕನ್ನಡ ಸಂಘದಲ್ಲಿ ಶ್ರೀ ಗಣೇಶೋತ್ಸವ ಸಂದರ್ಭದಲ್ಲಿ
ಆಲಂಕೃತಗೊಂಡ ಶ್ರೀ ಗಣಪತಿಯ ವಿಗ್ರಹ



ಮೈಸೂರು
ಅಸೋಸಿಯೇಶನ್‌ನ
ಪರವಾಗಿ
ಇತ್ತೀಚೆಗೆ ನಮ್ಮನ್ನಗಲಿದ
ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತ
ಡಾ. ಯು. ಆರ್.
ಅನಂತಮೂರ್ತಿಯವರಿಗೆ
ಭಾವಪೂರ್ಣ
ಶ್ರದ್ಧಾಂಜಲಿ.

## UDAD DAL LADDU



**INGREDIENTS:**

1] UDAD DAL - 1 CUP
2] RICE FLOUR - ½ CUP
3] GHEE - ½ CUP
4] SUGAR - 1¼ CUP
5] ELACHI - 5-6
6] CASHEW - 10
7] COPRA - ½ CUP

**Method:**

1] Roast the udad dal and rice flour
2] Grind the roasted dal into powder
3] Grind the sugar. Mix all and pour the hot ghee on it.
4] Put the elachi powder
5] Make the ladoos from that

❀ ❀ ❀

## STEAMED VEGETABLE DAL VADA



**INGREDIENTS:**

THOOR DAL – 1 CUP
CHANA DAL – 1 CUP
SWEET CORN – 1 CUP
CABBAGE – 1 CUP
ONION – 3
GREEN CHILI – 5-6
CORIANDER – 1 BUNCH
GINGER – 1 BIG PIECE
SALT

1] SOAK BOTH THE DALS FOR 3 HOURS
2] GRIND THE DALS & SWEET CORN INTO COARSE
3] CUT CABBAGE, ONION, CHILLI, CORIANDER, GINGER
4] MIX ALL INGREDIENTS TOGETHER ADD SALT.
5] PUT INTO GREESED BOWL AND STEAM FOR 15-20 MINUTES

**- Lata Upadhya**

Date of Publication : 10th of every month RNI No. 040015 / 83
MH / MR / North East / 093 / 2012- 2014 Date of Posting : 10th of every month at Mumbai Patrika Channel Sorting Office G.P.O.

## ಅಸೋಸಿಯೇಷನ್‌ನಲ್ಲಿ ಗೌರಿ - ಗಣೇಶ ಹಬ್ಬದ ಆಚರಣೆಯೊಂದಿಗೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು







ಅಸೋಸಿಯೇಶನ್‌ನ ಸದಸ್ಯರಿಂದ ಕಡಲ ಕಿನಾರೆಯಲ್ಲಿ ಶ್ರೀ ಗಣೇಶನ ವಿಸರ್ಜನೆ.

2014ನೆ ಸಾಲಿನ ಗಣೇಶೋತ್ಸವದ ಅಂಗವಾಗಿ ದಿನಾಂಕ 30.08.2014 ರಂದು ಕರ್ನಾಟಕ ಸಂಗೀತದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸದರಿ ಕಾರ್ಯಕ್ರಮಕ್ಕೆ ಶ್ರೀ ಸೂರಜ್ ವೆಂಕಟಾಚಲಮ್‌ರವರ ಸಂಗೀತವನ್ನು ಯೋಜಿಸಿ ಸಭಾಗೃಹದಲ್ಲಿ ಹಾಡಿಸಲಾಯಿತು. ಶ್ರೀ ಸೂರಜ್ ವೆಂಕಟಾಚಲಮ್ ಅವರು 2013 ನೆ ಸಾಲಿನಲ್ಲಿ ಮೈಸೂರು ಅಸೋಸಿಯೇಷನ್ ಏರ್ಪಡಿಸಿದ ಕರ್ನಾಟಕ ಸಂಗೀತದ ಗಾಯನ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಗಳಿಸಿದ್ದರಿಂದ ಅವರ ಕಾರ್ಯಕ್ರಮವನ್ನು ಈ ವರ್ಷ ಏರ್ಪಡಿಸಿದ್ದು ಒಂದು ರೀತಿಯಲ್ಲಿ ಅವರಿಗೆ ಉಡುಗೊರೆಯಂತೆ ಇತ್ತು. ಶ್ರೀ ಸೂರಜ ಅವರು ಸದ್ಯ I.D.B.I. Bank ನಲ್ಲಿ ಉದ್ಯೋಗಸ್ಥರಾಗಿದ್ದು ಹವ್ಯಾಸಿಯಾಗಿ ಸಂಗೀತ ಸೇವೆ ಮಾಡುತ್ತಿದ್ದಾರೆಂಬುದು ಪ್ರಶಂಸನೀಯ.

ಅಂದು ಕಚೇರಿಯ ಆರಂಭದಲ್ಲಿ ಶ್ರೀಮತಿ ಲಕ್ಷ್ಮೀ ಸೀತಾರಾಂ ಅವರು ಶ್ರೀ ಸೂರಜರನ್ನು ಸಹ ವಾದ್ಯ ವೃಂದದವರೊಂದಿಗೆ ಸ್ವಾಗತಿಸಿ ಅವರ ಪರಿಚಯವನ್ನು ಮಾಡಿಕೊಟ್ಟರು. ಅಸೋಸಿಯೇಶನ್ನಿನ ಸದಸ್ಯರಿಂದ ಹೂ ಗುಚ್ಚವನ್ನು ಕೊಡಿಸಿ ಸನ್ಮಾನಿಸಿದರು. ಶ್ರೀ ಸೂರಜ ವೆಂಕಟಾಚಲಮ್ ಅವರು ತಮ್ಮ ಕಚೇರಿಯನ್ನು ಗಣಪತಿಯ ಸ್ತುತಿಯಿಂದ "ಗಜವದನ ಕರುಣಾಸಾಗರ..." ಎಂಬ ಸಂಸ್ಕೃತ ಕೃತಿಯನ್ನು ರಾಗ ಆಭೋಗಿಯಲ್ಲಿ ಪ್ರಸ್ತುತ ಪಡಿಸಿದರು. ತದನಂತರ 'ವಂಧೇಹಂ ಜಗತ್ ವಲ್ಲಭಮ್, ಪರಾತ್ಪಕ ಪರಮೇಶ್ವರ ಭಜಾಮಿ (ನೆರವಲ್) ಎಂಬ ಕೃತಿಗಳನ್ನು ಪ್ರಸ್ತುತಪಡಿಸಿ ಪುರಂದರ ದಾಸರ ಯಾದವ ನೀ ಬಾ ಯದುಕುಲ ನಂದನ ಎಂಬ ದೇವರನಾಮದಿಂದ ಕಚೇರಿಯನ್ನು ಮುಕ್ತಾಯ ಗೊಳಿಸಿದರು.

ಶ್ರೀ ಸೂರಜ ವೆಂಕಟಾಚಲಮ್‌ನವರೊಂದಿಗೆ ಶ್ರೀ ವೆಂಕಟಾರಾಮ್ ವಾಯೋಲಿನ್ ನಲ್ಲಿ ಹಾಗೂ ಶ್ರೀ ವಿಶ್ವಪ್ರಸನ್ನರು ಮೃದಂಗವನ್ನು ಬಾರಿಸಿ ಸಹಕರಿಸಿದರು.

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938